ಸಂಪುಟ 01 | ಸಂಚಿಕೆ 218 | ಶನಿವಾರ 04 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) **ಅಂತರರಾಷ್ಟ್ರೀಯ ಸಹಕಾರ ಸಂಘಗಳ ದಿನ:** ಜುಲೈ ಮೊದಲ ಶನಿವಾರವನ್ನು ವಿಶ್ವದಾದ್ಯಂತ (ಭಾರತ ಸೇರಿದಂತೆ) ಅಂತರರಾಷ್ಟ್ರೀಯ ಸಹಕಾರ ಸಂಘಗಳ ದಿನವಾಗಿ ಆಚ-ರಿಸಲಾಗುತ್ತದೆ. ಈ ದಿನವು ಆರ್ಥಿಕ ಅಭಿವೃದ್ಧಿ, ಸುಸ್ಥಿರತೆ ಹಾಗೂ ಸಮುದಾಯದ ಕಲ್ಯಾಣದಲ್ಲಿ ಸಹಕಾರ ಸಂಘಗಳ ಮಹತ್ವದ ಪಾತ್ರವನ್ನು ಜನರಿಗೆ ಅರಿವು ಮೂಡಿಸುವ ಉದ್ದೇಶ ಹೊಂದಿದೆ.

2) **ಡ್ರೀ ಹಬ್ಬದ ಪೂರ್ವ ಸಂಭ್ರಮಗಳು:** ಜುಲೈ 4ರ ಸಂಜೆ ಅರುಣಾಚಲ ಪ್ರದೇಶದ ಅಪಟಾನಿ (Apatani) ಜನಾಂಗದ ಪ್ರಮುಖ ಕೃಷಿ ಹಬ್ಬವಾದ ಡ್ರೀ ಹಬ್ಬದ ಪೂರ್ವಸಿದ್ಧತೆ ಮತ್ತು ಆಚರಣಾ ವಿಧಿವಿಧಾನಗಳಿಗೆ ಚಾಲನೆ ದೊರೆಯುತ್ತದೆ. ಈ ಹಬ್ಬವು ಉತ್ತಮ ಬೆಳೆ, ಸಮೃದ್ಧಿ ಹಾಗೂ ಜನರ ಕ್ಷೇಮಕ್ಕಾಗಿ ಆಚರಿಸಲಾಗುವ ಸಾಂಪ್ರದಾಯಿಕ ಕೃಷಿ ಉತ್ಸವವಾಗಿದೆ.

## ಸುಭಾಷಿತ

ನಮ್ಮನ್ನು ನಾವು ಸರಿಪಡಿಸಿಕೊಂಡರೆ, ಇಡೀ ಜಗತ್ತನ್ನು ಸರಿಪಡಿಸಿದಂತೆ. ನಮ್ಮಲ್ಲಿ ನಾವು ಪರಿವರ್ತನೆ ತಂದುಕೊಂಡರೆ, ಜಗತ್ತಿಗೇ ಬೆಳಕು ನೀಡಿದಂತೆ.

–ರಮಣ ಮಹರ್ಷಿ

## ತೈಲ ಬೆಲೆ ಇಳಿಕೆ ಮುಂದುವರೆದರೆ ಪೆಟ್ರೋಲ್ ದರ ಇಳಿಕೆ : ಹರ್ದೀಪ್ ಸಿಂಗ್ ಪುರಿ

❏ ನೈಜ್ಯ ದೇಸೆ ನ್ಯೂಸ್

**ನವದೆಹಲಿ: ಕಚ್ಚಾ ತೈಲ ಬೆಲೆ ಇಳಿಕೆ ಇದೇ ರೀತಿ ಸಾಗಿದರೆ ಪೆಟ್ರೋಲ್, ಡೀಸೆಲ್ ದರ ಕಡಿಮೆ ಮಾಡುವ ಬಗ್ಗೆ ಯೋಚಿಸಬಹುದು ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.**



ಚಿಲ್ಲರೆ ಇಂಧನ ಬೆಲೆಗಳ ಮುನ್ನೂ ಚನೆಯ ಕುರಿತು ಮಾತನಾಡಿದ ಪುರಿ, ಪ್ರಸ್ತುತ ಪೆಟ್ರೋಲ್ ಪಂಪ್‌ಗಳಲ್ಲಿ ಮಾರಾಟ ವಾಗುತ್ತಿರುವ ಇಂಧನವನ್ನು ಅಂತರರಾಷ್ಟ್ರೀಯ ಬೆಲೆಗಳು ಹೆಚ್ಚಿದ್ದಾಗ ಖರೀದಿಸಿದ ಕಚ್ಚಾ ತೈಲದಿಂದ ಸಂಸ್ಕರಿಸಲಾಗಿದೆ. ಹೀಗಾಗಿ, ಜಾಗತಿಕ ಕಚ್ಚಾ ತೈಲ ಬೆಲೆಗಳಲ್ಲಿನ ಇತ್ತೀಚಿನ ಕುಸಿತದ ಪ್ರಯೋಜನವು ಇನ್ನೂ ಚಿಲ್ಲರೆ ದರಗಳಲ್ಲಿ ಸಂಪೂರ್ಣವಾಗಿ ಪ್ರತಿಫಲಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಮುಂದಿನ ಎರಡು-ಮೂರು ತಿಂಗಳ ಕಾಲ ಕಚ್ಚಾ ತೈಲದ ಬೆಲೆಗಳು ಕಡಿಮೆಯಾಗಿಯೇ ಮುಂದುವರಿದರೆ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಇಳಿಕೆಯಾಗಬಹುದು ಎಂದು ಸಚಿವರು ತಿಳಿಸಿದ್ದಾರೆ. ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳ ಮೇಲಿನ ಆರ್ಥಿಕ ಒತ್ತಡದ ಬಗ್ಗೆ ಸಚಿವರು ತಿಳಿಸಿದ್ದಾರೆ. ಮಧ್ಯಪ್ರಾಚ್ಯ ಯುದ್ಧದಿಂದ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲವನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದರಿಂದ ಜೂ.30 ರ ವರೆಗೆ ಭಾರತದ ತೈಲ ಮಾರಾಟ ಕಂಪನಿಗಳಿಗೆ 74,781 ಕೋಟಿ ರೂ. ನಷ್ಟವಾಗಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

# ಸನ್ ರೈಸ್ ಡಿ ಫಾರ್ಮಸಿ ಕಾಲೇಜಿಗೆ ಶೇ.100ರಷ್ಟು ಫಲಿತಾಂಶದ ಸಂಭ್ರಮ

### ಡಿ ಫಾರ್ಮಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಅದ್ಭುತ ಸಾಧನೆ ಟಾಪರ್‌ಗಳಿಗೆ ಸಿಹಿ ತಿನಿಸಿ ಅಭಿನಂದಿಸಿದ ಸಂಸ್ಥೆಯ ಅಧ್ಯಕ್ಷ ಇರ್ಫಾನ್.ಕೆ

❏ ನೈಜ್ಯ ದೇಸೆ ನ್ಯೂಸ್









ಸಿಂಧನೂರು: ಸಿಂಧನೂರಿನ ಪ್ರತಿಷ್ಠಿತ ಸನ್ ರೈಸ್ ಡಿ ಫಾರ್ಮಸಿ ಕಾಲೇಜು 2026ರ ಮಾರ್ಚ್ ತಿಂಗಳಲ್ಲಿ ನಡೆದ ಡಿ.ಫಾರ್ಮಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ದಾಖಲಿಸುವ ಮೂಲಕ ಮತ್ತೊಮ್ಮೆ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನ ಶ್ರೇಷ್ಠತೆಯನ್ನು ಸಾಬೀತುಪಡಿಸಿದೆ. ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದು ಸಂಸ್ಥೆಯ ಹೆಮ್ಮೆಯ ಸಾಧನೆಯಾಗಿದ್ದು,ಸಿಂಧನೂರು ನಗರಕ್ಕೂ ವಿಶೇಷ ಕೀರ್ತಿಯನ್ನು ತಂದಿದೆ.

ಈ ಅಭೂತಪೂರ್ವ ಸಾಧನೆಯ ಹಿನ್ನೆಲೆಯಲ್ಲಿ ಕಾಲೇಜಿನಲ್ಲಿ ಆಯೋಜಿಸಲಾದ ಅಭಿನಂದನಾ ಸಮಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ ಅವರು ಪ್ರಥಮ, ದ್ವಿತೀಯ, ತೃತೀಯ ಹಾಗೂ ನಾಲ್ಕನೇ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಸಿಹಿ ತಿನಿಸಿ ಅಭಿನಂದನೆ ಸಲ್ಲಿಸಿದರು. ಇದೇ ವೇಳೆ ಎಲ್ಲಾ ವಿದ್ಯಾರ್ಥಿಗಳಿಗೆ ಶುಭಾಶಯಗಳನ್ನು ತಿಳಿಸಿ, ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಸಾಧನೆ ಮುಂದುವರಿಸುವಂತೆ ಪ್ರೋತ್ಸಾಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಾಲೇಜಿನ ಶೇ.100 ಫಲಿತಾಂಶವು ವಿದ್ಯಾರ್ಥಿಗಳ ನಿರಂತರ ಪರಿಶ್ರಮ, ಪ್ರಾಚಾರ್ಯರ ಸಮರ್ಥ ಮಾರ್ಗದರ್ಶನ ಹಾಗೂ ಉಪನ್ಯಾಸಕರ ಶ್ರದ್ಧೆಯುತ ಬೋಧನೆಯ ಫಲವಾಗಿದೆ ಎಂದು ಹೇಳಿದರು. ಉತ್ತಮ ಗುಣಮಟ್ಟದ ಶಿಕ್ಷಣ, ಶಿಸ್ತು ಮತ್ತು ವಿದ್ಯಾರ್ಥಿ ಕೇಂದ್ರಿತ ಕಲಿಕೆಯ ಮೂಲಕ ಸನ್ ರೈಸ್ ಶಿಕ್ಷಣ ಸಂಸ್ಥೆ ಉತ್ತಮ ಫಲಿತಾಂಶಗಳನ್ನು ದಾಖಲಿಸುತ್ತಿದ್ದು, ಮುಂದಿನ ದಿನಗಳಲ್ಲಿಯೂ ಇನ್ನಷ್ಟು ಸಾಧನೆ ಮಾಡಲು ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು.2026ರ ಡಿ.ಫಾರ್ಮಸಿ ಪರೀಕ್ಷೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಗಳಿಸಿ ಕಾಲೇಜಿನ ಗೌರವವನ್ನು ಹೆಚ್ಚಿಸಿದ್ದಾರೆ. ಪರೀಕ್ಷೆಯಲ್ಲಿ ಅನುಪಮಾ ಅವರು 807/1000 (80.7%) ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ. ಇಫ್ರಾ ಇರಂ ಸಿದ್ದಿಖಿ ಹಾಗೂ ಸಂಜನಾ ಶೆಟ್ಟಿ ಇಬ್ಬರೂ 788/1000 (78.8%) ಅಂಕಗಳನ್ನು ಪಡೆದು ಜಂಟಿಯಾಗಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಉಜ್ಮಾ ಪರ್ವೀನ್ ಅವರು 761/1000 (76.1%) ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದರೆ, ಸಮರ್ಥ ಗೌಡ ಅವರು 759/1000 (75.9%) ಅಂಕಗಳನ್ನು ಗಳಿಸಿ ನಾಲ್ಕನೇ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿಗಳ ಈ ಗಮನಾರ್ಹ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಚಾರ್ಯರು ಹಾಗೂ ಉಪನ್ಯಾಸಕರು ಹರ್ಷ ವ್ಯಕ್ತಪಡಿಸಿದ್ದು, ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಅತ್ಯುತ್ತಮ ಫಲಿತಾಂಶಗಳನ್ನು ಸಾಧಿಸುವ ವಿಶ್ವಾಸ ವ್ಯಕ್ತಪಡಿಸಿದರು.ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಇರ್ಷಾದ್ ಕೆ, ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ವಾಸಿಂ ಹುಸೇನ್, ಉಪನ್ಯಾಸಕರಾದ ಚಕ್ರವರ್ತಿ, ದಿಲೀಪ್, ಹರ್ಷಿತಾ, ಸಾಗರ್, ರಾಜೇಶ್, ಮನೋಹರ್, ಮೈಲಾಪುರ ವೀರಭದ್ರಯ್ಯ ಸ್ವಾಮಿ ಹಾಗೂ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.ಕಾಲೇಜಿನ ಶೇ.100 ಫಲಿತಾಂಶವು ಸನ್ ರೈಸ್ ಶಿಕ್ಷಣ ಸಂಸ್ಥೆಯ ಗುಣಮಟ್ಟದ ಶಿಕ್ಷಣ ವ್ಯವಸ್ಥೆಗೆ ಮತ್ತೊಂದು ಹೆಮ್ಮೆಯ ಗರಿಮೆಯಾಗಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಪೋಷಕರು ಹಾಗೂ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಮರಕಮದಿನ್ನಿ ಸರ್ಕಾರಿ ಶಾಲೆಗೆ ನೂತನ ಎಸ್‌ಡಿಎಂಸಿ ಪದಾಧಿಕಾರಿಗಳ ಆಯ್ಕೆ: 'ಶಾಲಾ ಅಭಿವೃದ್ಧಿಗೆ ಎಸ್‌ಡಿಎಂಸಿ ಪಾತ್ರ ದೊಡ್ಡದು'

❏ ನೈಜ್ಯ ದೇಸೆ ನ್ಯೂಸ್

**ಮಸ್ಕಿ: ತಾಲ್ಲೂಕಿನ ಮರಕಮದಿನ್ನಿ ಗ್ರಾಮದ ಪಿಎಂ ಶ್ರೀ ಸರ್ಕಾರಿ ಪ್ರೌಢ ಶಾಲೆಯಲ್ಲಿ ನೂತನವಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು (SDMC) ಇತ್ತೀಚೆಗೆ ರಚಿಸಲಾಯಿತು ಎಂದು ಶಾಲೆಯ ಮುಖ್ಯ ಶಿಕ್ಷಕಿ ಕಮಲಾಕ್ಷಿ ತಿಳಿಸಿದ್ದಾರೆ. ನೂತನ ಎಸ್‌ಡಿಎಂಸಿ ಅಧ್ಯಕ್ಷರಾಗಿ ದೇವರಾಜ ನಾಯಕ (ತಂದೆ: ಹನುಮಂತಪ್ಪ) ಅವರು ಹಾಗೂ ಇನ್ನುಳಿದ 9 ಜನ ಸದಸ್ಯರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.**



ಈ ಸಂದರ್ಭದಲ್ಲಿ ಶಾಲೆಯ ಸಹ ಶಿಕ್ಷಕ ಬಸವರಾಜ ಮಾತನಾಡಿ, "ಶಾಲೆಯು ಎಲ್ಲಾ ರಂಗಗಳಲ್ಲಿ ಸಾಧನೆ ಮಾಡಲು ಶಿಕ್ಷಕರ ಜೊತೆ ಜೊತೆಗೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯೂ ಸಹ ಬಹುದೊಡ್ಡ ಪಾತ್ರವಹಿಸುತ್ತದೆ. ಆದ್ದರಿಂದ ತಾವುಗಳು ಇದು ನಮ್ಮೂರ ಶಾಲೆ, ನಮ್ಮ ಮಕ್ಕಳು ಓದುವ ಶಾಲೆ ಎಂದು ತಿಳಿದು, ಶಾಲೆಯ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ" ಎಂದು ತಿಳಿಸಿದರು.

ನೂತನ ಪದಾಧಿಕಾರಿಗಳಿಗೆ ಸನ್ಮಾನ: ಸಭೆಯ ನಂತರ ಶಾಲೆಯ ಮುಖ್ಯ ಶಿಕ್ಷಕಿ ಕಮಲಾಕ್ಷಿ ಅವರ ನೇತೃತ್ವದಲ್ಲಿ ಶಾಲೆಯ ಸಹ ಶಿಕ್ಷಕರು ಮತ್ತು ಗ್ರಾಮಸ್ಥರು ಸೇರಿ ನೂತನವಾಗಿ ಆಯ್ಕೆಯಾದ ಎಸ್‌ಡಿಎಂಸಿ ಅಧ್ಯಕ್ಷರನ್ನು ಹಾಗೂ ಸರ್ವ ಸದಸ್ಯರನ್ನು ಶಾಲೆಯ ಪರವಾಗಿ ಸನ್ಮಾನಿಸಿ, ಆತ್ಮೀಯವಾಗಿ ಸ್ವಾಗತಿಸಿಕೊಂಡರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡರಾದ ಶರಣಪ್ಪ ನಾಯಕ, ಮಹಾದೇವಪ್ಪ ಕಂಬಳಿ, ದೇವಣ್ಣ ನಾಯಕ, ರಮೇಶ್ ಕತ್ತೆರ, ಈರಣ್ಣ ಇಳಿಗೇರ, ಮರಿದೇವ ಸೇರಿದಂತೆ ಶಾಲಾ ಸಿಬ್ಬಂದಿ ವರ್ಗ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ನೇತಾಜಿ ಪಿ.ಯು. ಕಾಲೇಜಿನಲ್ಲಿ ಸ್ವಾಗತ ಸಮಾರಂಭ

❏ ನೈಜ್ಯ ದೇಸೆ ನ್ಯೂಸ್

**ಮಾನ್ವಿ: ವಿದ್ಯಾರ್ಥಿಗಳು ತಮ್ಮ ಗುರಿಯ ಬಗ್ಗೆ ಸ್ಪಷ್ಟತೆ ಹೊಂದಿ, ನಿರಂತರ ಅಭ್ಯಾಸ ಮತ್ತು ಶಿಸ್ತಿನ ಜೀವನವನ್ನು ರೂಢಿಸಿಕೊಳ್ಳಬೇಕು. ಸತತ ಪರಿಶ್ರಮವೇ ಯಶಸ್ಸಿನ ಮೂಲವಾಗಿದ್ದು, ಇಂದಿನ ಅಧ್ಯಯನವೇ ನಾಳಿನ ಉಜ್ವಲ ಭವಿಷ್ಯವನ್ನು ರೂಪಿಸುತ್ತದೆ ಎಂದು ಶಾಸಕ ಹಂಪಯ್ಯ ನಾಯಕ ಹೇಳಿದರು.**




ಅವರು ಮಾನ್ವಿಯ ನೇತಾಜಿ ಪಿ.ಯು. ಕಾಲೇಜಿನಲ್ಲಿ ಪ್ರಥಮ ವರ್ಷದ ವಿಜ್ಞಾನ,ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಉತ್ತಮ ವ್ಯಕ್ತಿತ್ವ, ನೈತಿಕ ಮೌಲ್ಯಗಳು ಮತ್ತು ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಸಮಾಜಕ್ಕೆ ಆದರ್ಶ ನಾಗರಿಕರಾಗಬೇಕು ಎಂದು ಕರೆ ನೀಡಿದರು.ಪ್ರಾಸ್ತಾವಿಕ ವಾಗಿ ಮಾತನಾಡಿದ ಆಡಳಿತಾಧಿಕಾರಿ ಡಾ.ಕೆ.ವಿನಯಾ ಮಾತನಾಡಿ ಕಳೆದ ನಾಲ್ಕು ವರ್ಷದಿಂದ ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಜಿಲ್ಲೆಯಲ್ಲೇ ಅತ್ಯಂತ ಉತ್ತಮ ಫಲಿತಾಂಶ ಕೊಟ್ಟಿದ್ದೇವೆ. ವಿಜ್ಞಾನ ವಿಭಾಗ ದಲ್ಲೂ ಇದೇ ಪರಂಪರೆ ಮುಂದುವರೆಸುತ್ತೇವೆ.ಇದಕ್ಕೆ ವಿದ್ಯಾರ್ಥಿ ಗಳ ,ಪಾಲಕರ ಸಹಕಾರ ಬೇಕು ಎಂದರು. ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಕೆ.ವಿಜಯ ಲಕ್ಷ್ಮಿ, ಕೆ.ರಾಜಾ ರವಿವರ್ಮಾ, ಅನೀಸ್ ಫಾತಿಮಾ, ರಹಿಂ,ಬಸವರಾಜ, ಸೇರಿದಂತೆ ಎಲ್ಲಾ ಉಪನ್ಯಾಸಕರು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತ-ರಿದ್ದರು.ಕೊನೆಯಲ್ಲಿ ವಿದ್ಯಾರ್ಥಿ ಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

# ಎಮ್ಮಿಗನೂರು ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಮತದಾರರ ಪಟ್ಟಿ ಪರಿಷ್ಕರಣೆ

❏ ನೈಜ್ಯ ದೇಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ತಾಲೂಕಿನ ಎಮ್ಮಿಗನೂರು ಗ್ರಾಮದಲ್ಲಿ ಚುನಾವಣಾ ಆಯೋಗದ ನಿರ್ದೇಶನದಂತೆ ಬಿಎಲ್‌ಒಗಳ ಸಮ್ಮುಖದಲ್ಲಿ ಮನೆ ಮನೆಗೆ ತೆರಳಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ನಡೆಯಿತು.**



ನಂತರ ಭಾರತೀಯ ಜನತಾ ಪಾರ್ಟಿ ಕಂಪ್ಲಿ ಮಂಡಲದ ಯುವ ಮೋರ್ಚದ ಅಧ್ಯಕ್ಷ ಎಮ್ಮಿಗನೂರು ವಿರೇಶ ಬಡಿಗೇರ್ ಮಾತನಾಡಿ, ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗವೂ ಮತದಾರರ ಪಟ್ಟಿಯಲ್ಲಿರುವ ಕೆಲ ನಕಲಿ ಮತದಾರರನ್ನು ಮತ್ತು ಬೇರೆ ಬೇರೆ ಕಡೆಗಳಲ್ಲಿರುವ ಮತದಾರರನ್ನು ತೆಗೆಯಲು ಮತದಾರರ ಪರಿಷ್ಕರಣೆ(ಎಸ್‌ಐಆರ್) ಮಾಡಲಾಗುತ್ತಿದೆ. ಅಧಿಕಾರಿಗಳು ಪ್ರತಿ ಮನೆಗೂ ಭೇಟಿ ನೀಡಿ ಮತದಾರರ ಪಟ್ಟಿಯನ್ನು ಪರಿಶೀಲನೆ ಮಾಡುತ್ತಿದ್ದಾರೆ.

ಇದರಲ್ಲಿ ಹೊಸ ಮತದಾರರ ಸೇರ್ಪಡೆ, ಮೃತಪಟ್ಟವರ ಹಾಗೂ ಸ್ಥಳಾಂತರಗೊಂಡವರ ಹೆಸರುಗಳನ್ನು ಪಟ್ಟಿಯಿಂದ ತೆಗೆದಯ ಹಾಕಲಾಗುತ್ತದೆ. ಪ್ರಜಾಪ್ರಭುತ್ವದ ಯಶಸ್ಸಿಗೆ ನಿಖರವಾದ ಮತದಾರರ ಪಟ್ಟಿ ಅತ್ಯವಶ್ಯಕವಾಗಿದೆ. ರಾಜ್ಯಾದ್ಯಂತ ಆರಂಭವಾಗಿರುವ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣ ಕಾರ್ಯಕ್ರಮಕ್ಕೆ ಪ್ರತಿಯೊಬ್ಬ 18 ವರ್ಷ ಮೇಲ್ಪಟ್ಟ ಎಲ್ಲಾ ನಾಗ-ರಿಕರು ಸಕ್ರಿಯವಾಗಿ ಭಾಗವಹಿಸಬೇಕು.

ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು, ವಿಳಾಸ ಹಾಗೂ ಇತರೆ ವಿವರಗಳನ್ನು ಪರಿಶೀಲಿಸಿ ಅಗತ್ಯ ತಿದ್ದುಪಡಿಗಳನ್ನು ಮಾಡಿಸಿಕೊಳ್ಳಬೇಕು. ಎಸ್‌ಐಆರ್ ಸಮಗ್ರ ಪರಿಷ್ಕರಣ ಕಾರ್ಯಕ್ರಮಕ್ಕೆ ಸಾರ್ವಜನಿಕರು ಸಹಕರಿಬೇಕು ಎಂದರು. ಈ ಸಂದರ್ಭದಲ್ಲಿ ಬಿಎಲ್‌2 ಅಂಗನವಾಡಿ ಶಿಕ್ಷಕಿ ಜಡೆಮ್ಮ, ಮಂಡಲ ಪ್ರಧಾನ ಕಾರ್ಯದರ್ಶಿ ಫಕೀರಪ್ಪ, ಉಪಾಧ್ಯಕ್ಷ ಶರಣಗೌಡ ಇದ್ದರು.

# ಎಮ್ಮಿಗನೂರು ಗ್ರಾಮೀಣ ಪ್ರದೇಶದಲ್ಲಿ ಜನಮನ ಸೆಳದ ಸುಗಮ ಸಂಗೀತ ಕಾರ್ಯಕ್ರಮ-2026

❏ ನೈಜ್ಯ ದೇಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ :ತಾಲೂಕಿನ ಎಮ್ಮಿಗನೂರು ಗ್ರಾಮದಲ್ಲಿ ಡಾ|| ಅಬ್ದುಲ್ ಕಲಾಂ ಎಸ್. ಪಿ ಚಾ-ರಿಟೇಬಲ್ ಫೌಂಡೇಶನ್(ರಿ) ಎಮ್ಮಿಗನೂರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಳ್ಳಾರಿ ಇವರ ಸಹಯೋಗದೊಂದಿಗೆ ಗುರುವಾರ ಸಂಜೆ ಸುಗಮ ಸಂಗೀತ ಕಾರ್ಯಕ್ರಮವನ್ನು ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.**




ಇಂದಿನ ಮಕ್ಕಳಿಗೆ ತಂದೆ ತಾಯಿ ಮತ್ತು ಗುರುಗಳು ಉತ್ತಮವಾದ ಮಾರ್ಗದರ್ಶನ ನೀಡಬೇಕು. ಇಂದಿನ ದಿನಗಳಲ್ಲಿ ಮಕ್ಕಳಿಗೆ ಮೊಬೈಲ್ ಫೋನ್ ಬಳಕೆ ಅತಿ ಹೆಚ್ಚಾಗಿ ಪರಿಣಾಮ ಬೀರಿದೆ ಅದನ್ನು ತಪ್ಪಿಸುವ ಕೆಲಸ ಮನೆಯಲ್ಲಿ ತಾಯಿ ಮೊದಲು ಗುರುಗಳು ಎಂದು ಕರೆಯುತ್ತಾರೆ ಆ ತಾಯಿ ಮಕ್ಕಳಿಗೆ ಆಟದ ಮೇಲೆ ಪರಿಣಾಮ ಬೀರುವಂತೆ ಪ್ರೇರಿಸಬೇಕು ಮಕ್ಕಳಿಗೆ ತಂದೆ ಒಳ್ಳೆಯ ಕಥೆರನಾಟಕ, ಹಾಡುಗಳು ಹೇಳುವುದರ ಮುಖಾಂತರ ಸಂಸ್ಕೃತಿ ಬಗ್ಗೆ ಅರಿವು ಮೂಡಿಸಬೇಕು. ಶಾಲಾ ಹಂತದಲ್ಲಿ ಮಕ್ಕಳಿಗೆ ಸತ್ಯಾಂಶ ಬಗ್ಗೆ ಅರಿವು ಮೂಡಿಸುವ ನಾಟಕ,ಸಂಗೀತ, ನೃತ್ಯ ಕೈಗೊಳ್ಳಬೇಕು ಶಾಲೆಗಳಲ್ಲಿ ರಂಗಭೂಮಿ ಶಿಕ್ಷಕರ ನೇಮಕಾತಿ ಪ್ರಾರಂಭವಾಗಬೇಕೆಂದು ಸಸಿಗೆ ನೀರು ಎರೆಯುವುದರ ಮುಖಾಂತರ ಉದ್ಘಾಟನಾ ಕಾರ್ಯಕ್ರಮವನ್ನು ನೇರವೇರಿಸಿದ ರಂಗನಿರ್ದೇಶಕರಾದ ಮಾವಿನಹಳ್ಳಿಯ ಕುರುಬರ ಹೇಮೇಶ್ವರ ಉದ್ಘಾಟಕರ ನುಡಿಯನ್ನು ಪ್ರಸ್ತಾಪಿಸಿದರು.

ಇಂದಿನ ತಲೆ ಮಾರಿನ ಯುವ ಪೀಳಿಗೆಗೆ ಹಳೆಯ ರಂಗಭೂಮಿ ಕಲಾವಿದರನ್ನು ಗುರುತಿಸಿ ಮಕ್ಕಳಿಗೆ ಪರಿಚಯಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡುತ್ತಿದೆ ಇವರು ಮಾಡುವ ಸಹಕಾರದಿಂದ ಕಲೆ,ಸಾಹಿತ್ಯ ಮತ್ತು ರಂಗಭೂಮಿ ಕಲೆಗಳನ್ನು ಹೊರ ತರಲು ಸಾಧ್ಯವಾಗುತ್ತದೆಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಂಗಭೂಮಿ ಕಲಾವಿದರು ಎಮ್ಮಿಗನೂರು ಅಧ್ಯಕ್ಷತೆ ನುಡಿಯನ್ನು ಮಾತಾಡಿದರು.

**ಸಾಂಸ್ಕೃತಿಕ ಕಾರ್ಯಕ್ರಮ:** **ಸುಗಮ ಸಂಗೀತ:** ರಾಜ ಎಮ್ಮಿಗನೂರು ಮತ್ತು ತಂಡದವರು ಶಿವ, ಶಿವೆ, ಶಿಶುನಾಳ ಶರೀಫರ ತತ್ವಪದಗಳು ಸೇರಿದಂತೆ ಹಳ್ಳಿ ಸೊಬಗಿನ ಸುಗಮ ಸಂಗೀತವನ್ನು ಹಾಡಿ ಜನಮನ ಗೆದ್ದರು.

ಈ ಸಂದರ್ಭದಲ್ಲಿ ಶಿಕ್ಷಕರ ಭೀಮೇಶ್, ರಮೇಶ, ಅಡಿಗೆ ಸಹಾಯಕರು ವಿಜಯ್ ,ರಂಗ ನಿರ್ದೇಶಕರು ಕುರುಬರ ಹೇಮೇಶ್ವರ. ಮಾವಿನಹಳ್ಳಿ ಸಂಗೀತಗಾರರಾದ ಶ್ರೀಮತಿ ಸಂಗೀತ ಗಂಗಾವತಿ, ತಬಲಾ ವಾದಕರಾದ ರಾಘವೇಂದ್ರ ಗಂಗಾವತಿ, ಕ್ಯಾಶಿಯೋನ ರಾಮ ಕಂಪ್ಲಿ, ಊರಿನ ಗುರು ಹಿರಿಯರ ಮತ್ತು ರೈತ ಬಾಂಧವರು, ಹಾಗೂ ಸಾರ್ವಜನಿಕರು,ಡಾ.ಅಬ್ದುಲ್ ಕಲಾಂ ಎಸ್. ಪಿ ಚಾರಿಟೇಬಲ್ ಫೌಂಡೇಶನ್ ಅಧ್ಯಕ್ಷರು ಶ್ರೀಮತಿ ಬಿ.ಸಬೀನ್ ಮತ್ತು ಕಾರ್ಯದರ್ಶಿ ಶ್ರೀ ಹೆಚ್ ಪೀರಾವಲಿ ಮತ್ತು ಸರ್ವಸದಸ್ಯರು ಭಾಗವಹಿದ್ದರು. ನಿರೂಪಣೆ ಮತ್ತು ಸ್ವಾಗತ ರಮೇಶ ಎಮ್ಮಿಗನೂರು ನೆರವೇರಿಸಿಕೊಟ್ಟರು.

## ಸಾಹಿತ್ಯ ಸಿಂಚನ

### ಪಕ್ಷಿ

ಆಕಾಶದಲ್ಲಿ ಹಾರುವ ಸುಂದರ ಪಕ್ಷಿ,ಪ್ರಕೃತಿಯ
ಮಡಿಲಿನ ಮುದ್ದಿನ ರಕ್ಷಕಿ.ಬಣ್ಣದ ರೆಕ್ಕೆಗಳ ಸೊಬಗು
ಅಪಾರ,ನೋಡಿದ ಮನಗಳಿಗೆ ಸಂತಸದ ಸಾರ.

ಬೆಳಗಿನ ಜಾವದ ಮಧುರ ಗಾನ,
ಕೇಳಿದರೆ ದೂರವಾಗುವುದು ಆಯಾಸದ ಭಾರ.
ಮರದ ಕೊಂಬೆಯಲ್ಲಿ ಗೂಡು ಕಟ್ಟುತ್ತದೆ,
ಮರಿಗಳಿಗೆ ಪ್ರೀತಿಯಿಂದ ಆಹಾರ ನೀಡುತ್ತದೆ.

ಸ್ವಾತಂತ್ರ್ಯದ ಸಂಕೇತ ಈ ಹಕ್ಕಿ,
ಶ್ರಮದಿಂದ ಬದುಕುವ ಜೀವದ ಚಿಹ್ನೆ.ಹೂವಿನ
ತೋಟದ ಗೆಳತಿ ಇದು,ಹಸಿರು ಲೋಕದ ಅಮೂಲ್ಯ
ನಿಧಿ ಇದು.

ಗಾಳಿ ಜೊತೆ ನಲಿದು ಹಾರುವ ಚಿಲಿಪಿಲಿ,ಕಣ್ಣಿಗೆ
ಹಬ್ಬ ತರುವ ಬಣ್ಣದ ಕಿಲಿಕಿಲಿ.ಮಳೆಯ ಹನಿಯಲಿ
ರೆಕ್ಕೆ ತೋಯಿಸಿ,ಸೂರ್ಯನ ಕಿರಣದಲಿ ಹರ್ಷದಿಂದ
ನಲಿಯುತ್ತದೆ.

ಕಾಡು-ನಾಡಿನ ಸೊಬಗು ಹೆಚ್ಚಿಸುವ ಜೀವಿ,ಪರಿಸರ
ಸಮತೋಲನದ ನಿಜವಾದ ಸೇವಕಿ.ಬೀಜ ಹರಡಿ
ಗಿಡಗಳ ಬೆಳವಣಿಗೆಗೆ ನೆರವು,
ಪ್ರಕೃತಿಯ ಉಳಿವಿಗೆ ನೀಡುತ್ತದೆ ಕೊಡುಗೆ ದೊಡ್ಡದು.

ಪ್ರೀತಿ, ಕರುಣೆ, ಸಹಜೀವನದ ಸಂದೇಶ ಸಾರುವ
ಪಕ್ಷಿ,ನಮ್ಮ ಬದುಕಿಗೆ ನೀಡುತ್ತದೆ ಸ್ಫೂರ್ತಿಯ
ಶಕ್ತಿ.ಪ್ರಕೃತಿಯನ್ನು ಕಾಪಾಡೋಣ ಎಲ್ಲರೂ ಸೇ-
ರಿ,ಪಕ್ಷಿಗಳ ಕಲರವ ಮೊಳಗಲಿ ಸದಾ ಭೂಮಿಯ
ಮೇಲೆ.

-ಕವಿತಾ ಹಿರೇಮಠ್

# "ಬಾರದ ಮಳೆಯಿಂದ ಬಾಡುತ್ತಿರುವ ಬೆಳೆ"

## ರಾಯಚೂರು ಜಿಲ್ಲೆಯಲ್ಲಿ ಶೇಕಡ 39.41ರಷ್ಟು ಪ್ರದೇಶದಲ್ಲಿ ಮಾತ್ರ ಬಿತ್ತನೆ ಮಾಡಲಾಗಿದೆ.

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು -: ಜೂನ್ ಕಳೆದರೂ ವಾಡಿಕೆಯಷ್ಟೂ ಮಳೆ ಬಾರದ ಕಾರಣ ಜಿಲ್ಲೆಯಲ್ಲಿ ಬೆಳೆಗಳು ಒಣಗಲು ಆರಂಭಿಸಿವೆ. ರೈತರಿಗೆ ದಿಕ್ಕು ತೋಚದಂತಾಗಿದ್ದು, ಕೆಲವರು ಟ್ಯಾಂಕರ್ ಮೂಲಕ ಹೊಲಗಳಿಗೆ ನೀರು ತಂದು ಕೊಡಗಳ ಮೂಲಕ ಬೆಳೆಗಳಿಗೆ ಹಾಕಿ ಉಳಿಸಿಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ.**

ಒಣ ಭೂಮಿ ಹೊಂದಿರುವ ಸಿಂಧನೂರು, ದೇವದುರ್ಗ, ಲಿಂಗಸುಗೂರು ಹಾಗೂ ಸಿರವಾರ ತಾಲ್ಲೂಕಿನ ರೈತರು ಬಿತ್ತನೆ ಮಾಡಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಲಿಂಗಸುಗೂರು ತಾಲ್ಲೂಕಿನಲ್ಲಿ ಮೊಳಕೆಯೊಡುವ ಹಂತದಲ್ಲೇ ಬೆಳೆ ಒಣಗಲು ಆರಂಭಿಸಿದೆ. ಹತ್ತಿ, ತೊಗರಿ ಹಾಗೂ ಸೂರ್ಯಕಾಂತಿ ಬಿತ್ತನೆ ಮಾಡುವ



ರೈತರು ಮಳೆಗಾಗಿ ಎದುರು ನೋಡುತ್ತಿದ್ದಾರೆ.

ಸಿರವಾರ ತಾಲ್ಲೂಕಿನ ಕುರಕುಂದ ಗ್ರಾಮದಲ್ಲಿ 3 ಎಕರೆ ಜಮೀನಿನಲ್ಲಿ ಹತ್ತಿ ಬಿತ್ತನೆ ಮಾಡಿರುವ ರೈತ ಹುಸೇನಸಾಬ್ ಕುಟುಂಬದವರು ಕಳೆದ 10 ದಿನಗಳಿಂದ ಟ್ಯಾಂಕರ್ ಮೂಲಕ ನೀರು ತಂದು ಪೈಪ್ ಅಳವಡಿಸಿ ಬೆಳೆಗೆ ನೀರು ಬಿಟ್ಟು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

'ಮಳೆ ಬಾರದ ಕಾರಣ 10 ದಿನಗಳಿಂದ ಹತ್ತಿ ಬೆಳೆಗೆ ಟ್ಯಾಂಕರ್ ಮೂಲಕ ನೀರು ಕೊಡುತ್ತಿದ್ದಾರೆ. ಇದೇ ಪರಿಸ್ಥಿತಿ ಮುಂದುವ-ರಿದರೆ ಬೆಳೆ ಸಂಪೂರ್ಣ ಒಣಗಿ ಹೋಗಲಿದೆ. ನಾವಷ್ಟೇ ಅಲ್ಲ; ಅನೇಕ ರೈತರು ಬೆಳೆ ನಷ್ಟ ಅನುಭವಿಸಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿದ್ದಾರೆ' ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ.

ರಾಯಚೂರು ತಾಲ್ಲೂಕಿನ ಜಕ್ಕಲದಿನ್ನಿ ಗ್ರಾಮದಲ್ಲಿ ರೈತರು ಹತ್ತಿ ಬೆಳೆಗೆ ಕೊಡಗಳ ಮೂಲಕ ನೀರು ಹಾಕಿ ಬೆಳೆ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಬಾರಿ ಉತ್ತಮವಾಗಿ ಮುಂಗಾರು ಬರಲಿದೆ ಎನ್ನುವ ನಿರೀಕ್ಷೆಯಲ್ಲಿ ರೈತರು ಬಿತ್ತನೆ ಮಾಡಿದ್ದರು. ಆದರೆ, ಒಂದು ತಿಂಗಳ ಅವಧಿಯಲ್ಲೇ ಮಳೆ ಕೈಕೊಟ್ಟಿದೆ. ಜಿಲ್ಲೆಯ ವಿವಿಧೆಡೆ ಮಳೆ ಇಲ್ಲದೇ ಬಿಸಿಲಿಗೆ ಬೆಳೆ ಒಣಗಿದೆ. ಮರು ಬಿತ್ತನೆಗೆ ಸರ್ಕಾರ ಬೀಜ ಹಾಗೂ ಗೊಬ್ಬರ ವಿತರಣೆಗೆ ವ್ಯವಸ್ಥೆ ಮಾಡಬೇಕು ಎಂದು ರೈತ ಮುಖಂಡರು ಆಗ್ರಹಿಸಿದ್ದಾರೆ.

'ಮಳೆ ಕೊರತೆ ಕಾರಣ ರಾಯಚೂರು ಜಿಲ್ಲೆಯಲ್ಲಿ 5,70,845 ಹೆಕ್ಟರ್ ಪೈಕಿ 2,24,970 ಪ್ರದೇಶದಲ್ಲಿ ಮಾತ್ರ ಅಂದರೆ ಶೇಕಡ 39.41ರಷ್ಟು ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ. ಮಳೆಯ ಕೊರತೆ ಕಾರಣ ಅದು ಸಹ ಒಣಗಲು ಆರಂಭಿಸಿದೆ' ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಪ್ರಕಾಶ ಚವಾಣ್ ತಿಳಿಸಿದ್ದಾರೆ.

ಮಳೆ ಕೊರತೆ: ರಾಯಚೂರು ಜಿಲ್ಲೆಯಲ್ಲಿ ಒಂದು ವಾರದ ಅವಧಿಯಲ್ಲಿ ಕೇವಲ 6.9. ಮಿ.ಮೀ. ಮಳೆಯಾಗಿದೆ. ವಾಡಿಕೆಯಷ್ಟೂ ಮಳೆಯಾಗದೆ 14.2 ಮಿ.ಮೀ ಮಳೆ ಕೊರತೆಯಾಗಿದೆ. ಜೂನ್‌ನಲ್ಲಿ 85.2 ಮಿ.ಮೀ ವಾಡಿಕೆಯ ಮಳೆಯಾಗಬೇಕಿತ್ತು. ಆದರೆ ಕೇವಲ 68.9 .ಮಿ.ಮೀ ಮಳೆಯಾಗಿದೆ.

## ರೈಲ್ವೆ ಮೇಲ್ಸೇತುವೆ ಲೋಕಾರ್ಪಣೆಯೊಂದಿಗೆ ಬಹು ದಶಕದ ಕನಸು ನನಸು : ಸಂಸದ ಈ.ತುಕಾರಾಂ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಕುಡತಿನಿಯಿಂದ ಸಿದ್ದಮ್ಮನಹಳ್ಳಿ ಮಾರ್ಗದ ಮೂಲಕ ಕುರುಗೋಡಿನ ಐತಿಹಾಸಿಕ ದೊಡ್ಡ ಬಸವೇಶ್ವರ ಸನ್ನಿಧಾನಕ್ಕೆ ಹೋಗಲು ಮತ್ತು ಎರಡು ಪಟ್ಟಣ ಮತ್ತು ಗ್ರಾಮೀಣ ಭಾಗದ ಜನರ ಸುಗಮ ಸಂಚಾರಕ್ಕಾಗಿ ರೈಲ್ವೆ ಮೇಲ್ಸೇತುವೆ ಲೋಕಾರ್ಪಣೆಯೊಂದಿಗೆ ಬಹು ದಶಕದ ಕನಸು ನನಸಾಗಿದೆ ಎಂದು ಸಂಸದ ಈ.ತುಕಾರಾಂ ಹೇಳಿದರು.**

ಕುಡತಿನಿ ಪಟ್ಟಣದ ಸಿದ್ದಮ್ಮನಹಳ್ಳಿ ಬಳಿಯಲ್ಲಿ ಸುಮಾರು 62 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ಸುಸಜ್ಜಿತ ರೈಲ್ವೆ ಮೇಲ್ವೇತುವೆಯನ್ನು ಶಾಸಕಿ ಈ.ಅನ್ನಪೂರ್ಣ ಅವರ ಸಮ್ಮುಖದಲ್ಲಿ ಉದ್ಘಾಟಿಸಿ ಮಾತನಾಡಿ, ಇಲ್ಲಿನ ರೈಲ್ವೆ ಮೇಲ್ವೇತುವೆ ಮಾಡುವದಕ್ಕೆ ಮೊದಲ ಆದ್ಯತೆ ನೀಡಿ, ಪೂರ್ಣಗೊಳಿಸಲಾಗಿದೆ. ಇದರಿಂದ ಮಾರ್ಗದಲ್ಲಿ ಸಂಚರಿಸಲು ಬಹಳಷ್ಟು ಜನತೆಗೆ ಅನುಕೂಲವಾಗಿದೆ. ಶಾಸಕರ ಅನುದಾನದ ಸುಮಾರು 42 ಲಕ್ಷ ವೆಚ್ಚದಲ್ಲಿ



ಕುಡತಿನಿ ಪಟ್ಟಣದ ಮಹಾದ್ವಾರ ನಿರ್ಮಾಣ ಮಾಡಲಾಗುವುದು. ಜನರ ತೆರಿಗೆ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಕೆ ಮಾಡಲಾಗುವುದು. 38 ಎಕರೆಯಲ್ಲಿ ಸುಮಾರು 240 ಕೋಟಿ ವೆಚ್ಚದಲ್ಲಿ ಮುಂದಿನ 50 ವರ್ಷದಲ್ಲಿ ಮಕ್ಕಳು ಸೇರಿದಂತೆ ಪ್ರತಿಯೊಬ್ಬರಿಗೂ ನೀರಿನ ಸಮಸ್ಯೆ ತಲೆದೋರದಂತೆ ಕುಡತಿನಿ, ವೇಣಿವೀರಾಪುರಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ರೂಪಿಸಲಾಗಿದೆ.

ಮುಂದಿನ ದಿನದಲ್ಲಿ ಕುಡತಿನಿಯಲ್ಲಿ 30 ಹಾಸಿಗೆವುಳ್ಳ ಆಸ್ಪತ್ರೆ ನಿರ್ಮಾಣ-ಕ್ಕೆ ಅನುದಾತ ತರಲಾಗುವುದು. ಕ್ಷೇತ್ರದ ಅಭಿವೃದ್ಧಿ ಜೊತೆಗೆ ಅಖಂಡ ಬಳ್ಳಾರಿ ಜಿಲ್ಲೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು. ನಂತರ ಇಲ್ಲಿನ ಏಳುಬೆಂಚಿ ಗ್ರಾಮಕ್ಕೆ ತೆರಳುವ ರೈಲ್ವೆ ಗೇಟ್ ಬಳಿಯಲ್ಲಿ ಕಾಯ್ದಿರಿಸಿರುವ ಜಾಗದಲ್ಲಿ ಸುಮಾರು 3.47 ಕೋಟಿ ಅನುದಾನದಲ್ಲಿ ಘನತ್ಯಾಜ್ಯ ಅಭಿವೃದ್ಧಿ ಕಾಮಗಾರಿಗೆ ಸಂಸದ ಈ.ತುಕಾರಾಂ, ಶಾಸಕಿ ಅನ್ನಪೂರ್ಣ ಶಂಕುಸ್ಥಾಪನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಅಧ್ಯಕ್ಷ ಏಕಾಂಬ್ರಪ್ಪ, ಕುಡತಿನಿ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ವಿ.ರಾಜಶೇಖರ, ಮುಖ್ಯಾಧಿಕಾರಿ ಶಿವಲಿಂಗಪ್ಪ, ಮುಖಂಡರಾದ ವೆಂಕಟರಮಣಬಾಬು, ಕನ್ನೇರಿ ಪಂಪಾಪತಿ, ಸತ್ಯಪ್ಪ, ವೆಂಕಟೇಶ, ಕಾಮೇಶ್ ಸೇರಿದಂತೆ ಸ್ಥಳೀಯ ಮುಖಂಡರು, ಕಾರ್ಯಕರ್ತರು ಮತ್ತು ವಿವಿಧ ಇಲಾಖೆ ಅಧಿಕಾರಿ ವರ್ಗದವರು ಪಾಲ್ಗೊಂಡಿದ್ದರು.

## ಮಕ್ಕಳಿಗೆ ಸಂವಿಧಾನ ಜಾಗೃತಿ ಮೂಡಿಸಿ: ಕರಿಯಪ್ಪ ಮುದ್ದಮಗುಡ್ಡಿ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಭಾರತದ ಸಂವಿಧಾನದ ಮಹತ್ವ,ಮೂಲಭೂತ ಹಕ್ಕುಗಳು,ಕರ್ತವ್ಯಗಳು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳ ಕು-ರಿತು ಸಂವಿಧಾನ ಜಾಗೃತಿ ಕಾರ್ಯಕ್ರಮಗಳು ಮಾಡುವುದ-ರಿಂದ ಮಕ್ಕಳಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸಲು ಸಹಕಾ-ರಿಯಾಗುತ್ತದೆ ಎಂದು ಕರಿಯಪ್ಪ ಮುದ್ದಮಗುಡ್ಡಿ ಹೇಳಿದರು.**




ಅವರು ತಾಲೂಕಿನ ಬಳಗಾನೂರು ಸರ್ಕಾರಿ ಪ್ರೌಢ ಶಾಲೆಯಲ್ಲಿ ಆಯೋಜಿಸಿದ್ದ ಮಕ್ಕಳ ಸಂವಿಧಾನಿಕ ಹಕ್ಕುಗಳ ಜಾಗೃತಿ ಕಾರ್ಯಕ್ರಮದ "ನಮ್ಮ ಕನಸು,ನಮ್ಮ ಸಂವಿಧಾನ" ಅಭಿಯಾನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಪೋತ್ನಾಳ ಜಾಗೃತ ಮಹಿಳಾ ಸಂಘಟನೆಯ ಸಂಂ-ಯೋಜಕರಾದ ಕರಿಯಪ್ಪ ಮುದ್ದಮಗುಡ್ಡಿ ಯವರು ಮಾತನಾಡಿದರು. ನಂತರ ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಶಾಲೆಯ ಮುಖ್ಯ ಶಿಕ್ಷಕ ಮಾತನಾಡಿ,ವಿದ್ಯಾರ್ಥಿಗಳಲ್ಲಿ ಭಾರತದ ಸಂವಿಧಾನದ ಕುರಿತು ಅರಿವು ಮೂಡಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದರು. ಈ ವೇಳೆ ಸಂಘಟನೆಯ ಸಮುದಾಯ ಸ್ವಯಂ ಸೇವಕರಾದ ತನ ಁಜಾ,ರತ್ನಮ್ಮ,ಜ್ಯೋತಿ,ಸ್ವಪ್ನ,ಪರಿಮಳ,ಕವಿತಾ ಮತ್ತು ಯಶೋಧ,ಜೆ-ಎಂಎಸ್ ಕಾರ್ಯಕರ್ತರಾದ ರೂಪ,ಮೌನೇಶ,ಕರಿಯಪ್ಪ,ದೇವಪುತ್ರ,ಲಕ್ಷ್ಮಿ,ಹುಲಿಗೆಮ್ಮ,ರಾಜೇಶ್ವರಿ ಸೇರಿದಂತೆ ಹಲವರು ಉಪಸ್ಥಿತರಿದ್ದು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ದೇವದುರ್ಗ ದುರಂತ ಸ್ಥಳಕ್ಕೆ ಲೋಕಸಭಾ ಸದಸ್ಯ ಶ್ರೀ ಜಿ. ಕುಮಾರ ನಾಯಕರ ಭೇಟಿ

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ಪಟ್ಟಣದಲ್ಲಿ ಎರಡು ದಿನದ ಹಿಂದೆ ಹಳೆಯ ವಾಣಿಜ್ಯ ಕಟ್ಟಡದ ಮೇಲ್ಚಾವಣಿ ಕುಸಿದು ಮೂವರು ವಿದ್ಯಾರ್ಥಿಗಳು ದುರ್ಮರಣ ಹೊಂದಿದ ದುರಂತ ನಡೆದ ಸ್ಥಳಕ್ಕೆ ಇಂದು ರಾಯಚೂರು?ಯಾದಗಿರಿ ಲೋಕಸಭಾ ಸದಸ್ಯರಾದ ಜಿ. ಕುಮಾರ ನಾಯಕರು ಎ.ರಾಜಶೇಖರ್ ನಾಯಕ ಅವರ ಜೋತೆ ಮತ್ತು ಸ್ಥಳೀಯ ಕಾಂಗ್ರೆಸ್ ಮುಖಂಡರೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.**

ದುರಂತದಲ್ಲಿ ಅಕಾಲಿಕವಾಗಿ ಅಗಲಿದ ವಿದ್ಯಾರ್ಥಿಗಳ ಆತ್ಮಕ್ಕೆ ಚಿರಶಾಂತಿ ಸಿಗಲಿ ಅವರ ಕುಟುಂಬಗಳಿಗೆ ಈ ದುಃಖವನ್ನು ಭರಿಸುವ ಶಕ್ತಿ ದೇವರು ಕರುಣಿಸಲಿ ಇಂತಹ ಹೃದಯ ವಿದ್ರಾವಕ ಘಟನೆಗಳು ಮತ್ತೆಂದಿಗೂ ಮರುಕಳಿಸದಿರಲಿ ಎಂಬುದು ಎಲ್ಲರ ಆಶಯ ವ್ಯಕ್ತಪಡಿಸಿ ದುರಂತದಲ್ಲಿ ಮೃತಪಟ್ಟ ವಿದ್ಯಾರ್ಥಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಿದ ಅವರು, ಇಂತಹ ದುರ್ಘಟನೆಗಳು ಮರುಕಳಿಸದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಶಾಲೆಗಳು ಹಾಗೂ ಸಾರ್ವಜನಿಕ



ಕಟ್ಟಡಗಳ ಸುರಕ್ಷತೆಗೆ ವಿಶೇಷ ಆದ್ಯತೆ ನೀಡಿ, ಮಕ್ಕಳ ಜೀವ ರಕ್ಷಣೆಗೆ ಅಗತ್ಯ ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕು ಎಂದು ತಿಳಿಸಿದರು. ಬಳಿಕ ಸ್ಥಳೀಯ ಜನರೊಂದಿಗೆ ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿದ ಸಂಸದರು, ದುರಂತದಲ್ಲಿ ಮೃತಪಟ್ಟ ವಿದ್ಯಾರ್ಥಿಗಳ ಕುಟುಂಬಗಳಿಗೆ ಸರ್ಕಾರದಿಂದ ಅಗತ್ಯ ನೆರವು ಹಾಗೂ ನ್ಯಾಯ ದೊರೆಯುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಜೊತೆಗೆ, ಜಿಲ್ಲೆಯಾದ್ಯಂತ ಶಿಥಿಲಾವಸ್ಥೆಯಲ್ಲಿರುವ ಹಳೆಯ ಕಟ್ಟಡಗಳನ್ನು ಸಮಗ್ರವಾಗಿ ಪರಿಶೀಲಿಸಿ, ಅಪಾಯಕಾರಿಯಾದ ಕಟ್ಟಡಗಳ ವಿರುದ್ಧ ಕಾನೂನುಬದ್ಧ ಹಾಗೂ ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ: ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರಾಮಣ್ಣ ಕೆ. ಇರಬಗೇರಾ, ಎಪಿಎಂಸಿ ಅಧ್ಯಕ್ಷರಾದ ಶ್ರೀ ಆದ-'ನಗೌಡ ಪಾಟೀಲ್, ಗ್ಯಾರಂಟಿ ಸಮಿತಿ ತಾಲೂಕ ಅಧ್ಯಕ್ಷರು ಶ್ರೀ ಲಕ್ಷ್ಮಣ ಜೋತಿ,ದೇವದುರ್ಗ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಶರಣಗೌಡ ಗೌರಂಪೇಟ, ಪಿ.ಎಲ್.ಡಿ.ಬಿ. ಬ್ಯಾಂಕ್ ಸದಸ್ಯರಾದ ಶ್ರೀ ಮೋನಪ್ಪ ನಾಯಕ ಹಾಗೂ ಶ್ರೀ ಶಿವರಾಜ್ ಪೂಜಾರಿ, ಕಾಂಗ್ರೆಸ್ ಹಿರಿಯ ಮುಖಂಡರಾದ ಶ್ರೀ ಅಮೀನ್ ಭಾಷಾ, ಶ್ರೀ ಸಾಜೀದ್ ಸಾಬ್, ಎಸ್ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ತಿಮ್ಮಣ್ಣ ದಿವಾನ್, ಶ್ರೀ ಫಿಡ್ಡಪ್ಪ ನಾಯಕ ಗೌರಂಪೇಟ, ಮಾಜಿ ಪುರಸಭೆ ಅಧ್ಯಕ್ಷರಾದ ಶ್ರೀ ಈರಪ್ಪ ನಾಯಕ, ಕಾಂಗ್ರೆಸ್ ಹಿರಿಯ ಮುಖಂಡರಾದ ಶ್ರೀ ಶರಣಗೌಡ, ಎಪಿಎಂಸಿ ಸದಸ್ಯರಾದ ಶ್ರೀ ಬಸವನಗೌಡ ಅರಶಿಣಿಗಿ, ಶ್ರೀ ಸುರೇಶ ನಾಯಕ ಚಿಂತಲಕುಂಟ, ಎಸಿ ಘಟಕದ ಮಾಜಿ ಅಧ್ಯಕ್ಷರಾದ ಶ್ರೀ ಭೂತಪ್ಪ ದೇವರಮನಿ, ಮಹಿಳಾ ಕಾಂಗ್ರೆಸ್ ಸಮಿತಿ ದೇವದುರ್ಗ ಬ್ಲಾಕ್ ಅಧ್ಯಕ್ಷರಾದ ಶ್ರೀಮತಿ ಅಮೃತ ಪಾಟೀಲ್, ಶ್ರೀ ಭೀಮಣ್ಣ ವಿರಗೋಟ್ ಎಸಿ ಘಟಕದ ಜಿಲ್ಲಾ ಉಪಾಧ್ಯಕ್ಷರು , ಶ್ರೀ ಹರ್ಷವರ್ಧನ್ ಮೇಟಿ ಕೊತ್ತದೊಡ್ಡಿ, ನಗರ ಘಟಕದ ಅಧ್ಯಕ್ಷರಾದ ಶ್ರೀ ಖಾಜಾ ಸಾಬ್, ದೇವದುರ್ಗ ವಿಧಾನಸಭಾ ಕ್ಷೇತ್ರ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಲಿಂಗಣ್ಣ ನಾಯಕ, ದೇವದುರ್ಗ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕುಮಾರ ರಾಠೋಡ್, ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷರಾದ ಶ್ರೀ ರಮೇಶ್ ಬಾಗೂರು ಸೇರಿದಂತೆ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು ಹಾಗೂ ಯುವ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

## ಶಾಸಕ ಗಣೇಶಗೆ ಸಚಿವ ಸ್ಥಾನ ಲಭಿಸಲೆಂದು ಧೀರ್ಘದಂಡ ನಮಸ್ಕಾರದ ಹಾಕಿದ ಉಪಾಧ್ಯಕ್ಷೆ ಶ್ರೀದೇವಿ ಹೊನ್ನಳ್ಳಿ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಸ್ಥಳೀಯ ಶಾಸಕ ಜೆ.ಎನ್. ಗಣೇಶ್‌ಗೆ ಸಚಿವ ಸ್ಥಾನ ಸಿಗಲೆಂದು, ಕಂಪ್ಲಿ ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕದ ಉಪಾಧ್ಯಕ್ಷೆ ಶ್ರೀದೇವಿ ಹೊನ್ನಳ್ಳಿ ಇವರು ಪಟ್ಟಣದಲ್ಲಿ ಧೀರ್ಘದಂಡ ನಮಸ್ಕಾರ ಸಲ್ಲಿಸಿದರು.**

ಇಲ್ಲಿನ ಉದ್ಭವ ದೇವಸ್ಥಾನದಿಂದ ಶುಕ್ರವಾರ ಬೆಳಗಿನ ಜಾವದಲ್ಲಿ ಧೀರ್ಘದಂಡ



ನಮಸ್ಕಾರ ಹಾಕುತ್ತಾ, ನಡುವಲ ಮಸೀದಿ, ಡಾ.ರಾಜಕುಮಾರ ಮುಖ್ಯರಸ್ತೆ ಮೂಲಕ ಗ್ರಾಮದ ದೇವತೆ ಮಾರೆಮ್ಮ ದೇವಸ್ಥಾನವರೆಗೆ ಹಾಕಿದರು. ತನದಂತರ ದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಶಾಸಕ ಗಣೇಶ್‌ಗೆ ಸಚಿವ ಸ್ಥಾನ ಲಭಿಸಲೆಂದು ಕೋರಿದರು.

ತದನಂತರ ಶ್ರೀದೇವಿ ಹೊನ್ನಳ್ಳಿ ಮಾತನಾಡಿ, ಕ್ಷೇತ್ರದಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳೊಂದಿಗೆ ಜನಪರ ಸೇವೆ ಮಾಡಿದ್ದಾರೆ. ಮತ್ತು ಪ್ರತಿಯೊಂದು ಹಂತದಲ್ಲಿ ಜನರ ಸಂಕಷ್ಟಗಳಿಗೆ ಸ್ಪಂದಿಸಿ, ಸೌಲಭ್ಯಗಳನ್ನು ಕಲ್ಪಿಸುತ್ತಿದ್ದಾರೆ. ಆದ್ದರಿಂದ ಇಂತಹ ಶಾಸಕ-ರಿಗೆ ಸಚಿವ ಸ್ಥಾನ ಸಿಕ್ಕರೆ, ಕ್ಷೇತ್ರ ಸೇರಿದಂತೆ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಆಗಲು ಸಾಧ್ಯ. ಈ ನಿಟ್ಟಿನಲ್ಲಿ ವರಿಷ್ಠರು, ಹೈಕಮಾಂಡ್ ಗಮನ ಹರಿಸಿ, ಸಚಿವ ಸ್ಥಾನ ನೀಡಬೇಕು ಎಂದರು. ಈ ಸಂದರ್ಭದಲ್ಲಿ ಅನೇಕ ಮಹಿಳೆಯರಿದ್ದರು.

# ಸರಕಾರಿ ಪಾಲಿಟೆಕ್ನಿಕ್‌ನಲ್ಲಿ ಆರೋಗ್ಯ ಜಾಗೃತಿ

## ರೋಗಗಳು ಬರುವುದು ಆಕಸ್ಮಿಕ, ರೋಗಿಯೊಂದಿಗೆ ಕಳಂಕ ಮತ್ತು ತಾರತಮ್ಯ ಮಾಡಬೇಡಿ:ಪ್ರಾಚಾರ್ಯ ಟಿ ಶಿವಕುಮಾರ್

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ವೈರಸ್‌ನಿಂದ ಬರುವ ಹೆಚ್‌ಐವಿ (ಏಡ್ಸ್ ), ಬ್ಯಾಕ್ಟಿರಿಯಾದಿಂದ ಹರಡುವ ಕ್ಷಯರೋಗ, ಕುಷ್ಟರೋಗಗಳು ಬಂದ ವ್ಯಕ್ತಿಗಳನ್ನು ಕಳಂಕ ತಾರತಮ್ಯ ಮಾಡದೆ ಆರೋಗ್ಯ ಇಲಾಖೆಯ ಮಾರ್ಗದರ್ಶನದಲ್ಲಿ ಸಮಾಜಮುಖಿಯಾಗಿ ಕಾಣಬೇಕು ಎಂದು ರಾಯಚೂರಿನ ಸರಕಾರಿ ಪಾಲಿಟೆಕ್ನಿಕ್ ನ ಪ್ರಾಂಶುಪಾಲರಾದ ಟಿ. ಶಿವಕುಮಾರ್ ತಿಳಿಸಿದರು.**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕೇಂದ್ರ, ಹಾಗೂ ಸರಕಾರಿ ಪಾಲಿಟೆಕ್ನಿಕ್ ರಾಯಚೂರು ಇವರ ಆಶ್ರಯದಲ್ಲಿ ಪ್ರಥಮ ಸೆಮಿಸ್ಟಾರ್‌ನ ವಿದ್ಯಾರ್ಥಿಗಳಿಗೆ ಆರೋಗ್ಯ ಜಾಗೃತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಆಕಸ್ಮಿಕವಾಗಿ ಅಥವಾ ಸೋಂಕಿತರೊಂದಿಗಿನ ಒಡನಾಟದಿಂದ ವೈರಸ್ ಮೂಲಕ ಒಬ್ಬರಿಂದ ಒಬ್ಬರಿಗೆ ಹರಡುವ




ಹೆಚ್‌ಐವಿ (ಏಡ್ಸ್ ), ಸೋಂಕಿತರೊಂದಿಗೆ ಹತ್ತಿರದ ಒಡನಾಟದಿಂದ ಬ್ಯಾಕ್ಟಿರಿಯಾ ಮೂಲಕ ಹರಡುವ ಕ್ಷಯರೋಗ, ಕುಷ್ಟರೋಗಗಳಿಗೆ ತುತ್ತಾಗುವವರನ್ನು ಆತ್ಮೀಯವಾಗಿ ಕಾಣಬೇಕೆ ಹೊರತು ಕಳಂಕ ತಾರತಮ್ಯ ಮಾಡಿ ಜೀವನ ಜೀಗುಪ್ಸೆಯಾಗುವಂತೆ ಯಾರು ಮಾಡಬಾರದು ಈ ದಿಶೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆಪ್ತ ಸಮಾಲೋಚನೆ, ಸೂಕ್ತ ಚಿಕಿತ್ಸೆಯ ಮೂಲಕ ರೋಗ ಹರಡದಂತೆ ಹಾಗೂ ಜಾಗೃತಿ ವಹಿಸಬೇಕಿದೆ ಎಂದು ತಿಳಿಸಿದರು.

ಜಿಲ್ಲಾ ಏಡ್ಸ್ ಮೇಲ್ವಿಚಾರಕ ಮಲ್ಲಯ್ಯ ಮಠಪತಿ ಮಾತನಾಡಿ, ಜೀವನ ಪರ್ಯಂತ ನಮ್ಮನ್ನು ಕಾಡುವ ಹೆಚ್‌ಐವಿ ಸೋಂಕು, ಇತ್ತೀಚಿನ ದಿನಗಳಲ್ಲಿ ಹದಿಹರೆಯದವರಲ್ಲಿ ಹೆಚ್ಚಿನ ಪ್ರಕರಣಗಳು ವರದಿಯಾಗುತ್ತಿರುವದು ಕಳವಳಕಾ-ರಿಯಾಗಿದೆ. ಅಪರಿಚಿತರೊಂದಿಗಿನ ಅಸುರಕ್ಷಿತ ಲೈಂಗಿಕ ಸಂಪರ್ಕ ಹೆಚ್‌ಐವಿ ಹರಡಲು ಪ್ರಮುಖ ಕಾರಣವೆನ್ನುವುದನ್ನು ನಾವು ಅರಿತುಕೊಳ್ಳಬೇಕು.



ಇತ್ತಿಚಿಗೆ 'ಮಿಷನ್ ಏಡ್ಸ್ ಸುರಕ್ಷಾ ಅಭಿಯಾನದ ಮೂಲಕ ಕ್ಯೂ ಆರ್ ಕೊಡ್' ಸಹಾಯದಿಂದ ಸ್ವಯಂ ಪ್ರಶ್ನೆಗಳಿಂದ ಸೋಂಕಿನ ಕುರಿತು ಜಾಗೃತಿ, ಪರೀಕ್ಷೆ ಮಾಡಿಸಿಕೊಳ್ಳಲು ಸಹಕಾರಿಯಾಗಿದೆ. ಅಲ್ಲದೆ ಕುಟುಂಬದಲ್ಲಿ ತಂದೆ ತಾಯಿಯ ಮಾರ್ಗದರ್ಶನ, ಬಂಧು, ಬಳಗ,ಹಿತೈಷಿಗಳ ಒಡನಾಟನಿಂದ ಸೋಂಕು ಹರಡದಂತೆ ಪಣತೊಡಲು ವಿನಂತಿಸಿದರು.

ಜಿಲ್ಲಾ ಕ್ಷಯರೋಗ ಕಾರ್ಯಕ್ರಮದ ಪಿಪಿಎಮ್ ಸಂಯೋಜಕ ಮೋಹಿನ್ ಪಾಶಾ, ಮಾತನಾಡಿ ಮೈಕೊ ಬ್ಯಾಕ್ಟೀರಿಯಂ ಟ್ಯೂಬರ್‌ಕ್ಯೂಲೋಸಿಸ್ ಎಂಬ ಸೂಕ್ಮಾಣುವಿಂದ ಗಾಳಿಯ ಮೂಲಕ ಒಬ್ಬರಿಂದ ಒಬ್ಬರಿಗೆ ಹರಡುವ ಕ್ಷಯರೋಗವನ್ನು ಯಾರಿಗಾದರೂ ಎರಡು ವಾರಕ್ಕಿಂತ ಹೆಚ್ಚು ದಿನಗಳಿಂದ ಸಾಮಾನ್ಯ ಚಿಕಿತ್ಸೆಯ ಮೂಲಕ ಗುಣವಾಗದ ಕೆಮ್ಮು, ಕಫದಲ್ಲಿ ರಕ್ತ ಕಂಡುಂಬಂದಲ್ಲಿ ಇದರೊಂದಿಗೆ ಸಂಜೆ ವೇಳೆ ಜ್ವರ, ರಾತ್ರಿ ಕಾರಣವಿಲ್ಲದೆ ಮೈ ಬೆವರುವಿಕೆ, ಹಸಿವಾಗದಿರುವುದು, ತೂಕ ಕಡಿಮೆಯಾಗುವುದು ಕಂಡು ಬಂದಲ್ಲಿ ತಡ ಮಾಡದೆ ವೈದ್ಯರ ಬಳಿ ಪರೀಕ್ಷೆ ಮಾಡಿಸಿ ಖಚಿತವಾದಲ್ಲಿ ಉಚಿತ ಚಿಕಿತ್ಸೆಯ ಮೂಲಕ ಗುಣಪಡಿಸಲು ಅವಕಾಶವಿದೆ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ಕುಷ್ಟರೋಗ, ಬಾಲ್ಯವಿವಾಹದ ಸಮಸ್ಯೆಗಳು, ಪೋಕ್ಸೊ ಕಾಯ್ದೆ, ಹೆಚ್‌ಪಿವಿ ಲಸಿಕೆ, ಕುರಿತು ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಮಹಮ್ಮದ್ ಆರೀಫ್, ಸಂದೀಪ್, ಭಾರತಿ, ಸೌಮ್ಯಶ್ರೀ, ಸ್ಮೀತಾ ಸಜ್ಜನ್, ನರೇಶ್ ಕುಮಾರ್, ಶೀಲ್ಪಾ ಆರ್, ಎಸ್‌ಟಿಎಸ್ ಅಮೀರ್, ಸೇರಿದಂತೆ ಇತರೆ ಸಿಬ್ಬಂದಿಯರು, ವಿದ್ಯಾರ್ಥಿಗಳು, ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

**ಬೆಂಗಳೂರು ಕೃಷಿ ಇಲಾಖೆ ನೇಮಕಾತಿ 2026 ?**
**2 ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕ ಹುದ್ದೆಗಳಿಗೆ**
**ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ 26, 2026**

ಬೆಂಗಳೂರು ಕೃಷಿ ಇಲಾಖೆ ನೇಮಕಾತಿ 2026: 2 ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಬೆಂಗಳೂರು ಕೃಷಿ ಇಲಾಖೆ ಜೂನ್ 2026 ರ ಅಧಿಕೃತ ಅಧಿಸೂಚನೆಯ ಮೂಲಕ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು ? ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 10–ಜುಲೈ–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಅಧಿಕೃತ ವೆಬ್‌ಸೈಟ್: bengalurusouth.nic.in


# ಹಟ್ಟಿ ಪಟ್ಟಣಕ್ಕೆ ಫೀಡರ್ ರಸ್ತೆ ನಿರ್ಮಾಣಕ್ಕೆ ಒತ್ತಾಯ

❏ ನ್ಯೆಜ್ಯ ದೆಸೆ ನ್ಯೂಸ್

**ಹಟ್ಟಿ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಹಟ್ಟಿ ಪಟ್ಟಣಕ್ಕೆ ಶೀಘ್ರ ಫೀಡರ್ ರಸ್ತೆ ನಿರ್ಮಿಸಿಕೊಡಬೇಕೆಂದು ಲಿಂಗಸುಗೂರು ತಾಲೂಕಿನ ಹಟ್ಟಿ ಪಟ್ಟಣ ನಾಗರಿಕ ಸಮಿತಿಯ ವತಿಯಿಂದ ರಾಯಚೂರು?ಯಾದಗಿರಿ ಲೋಕಸಭಾ ಕ್ಷೇತ್ರದ ಸಂಸದರಾದ ಜಿ ಕುಮಾರ್ ನಾಯಕ ಅವರಿಗೆ ಮನವಿ ಸಲ್ಲಿಸಲಾಯಿತು.**

ಹಟ್ಟಿ ಪಟ್ಟಣವು ರಾಯಚೂರು ಜಿಲ್ಲೆಯಲ್ಲಿಯೇ ಅತ್ಯಂತ ಮಹತ್ವದ ಹಾಗೂ ಅಭಿವೃದ್ಧಿ ಸಾಮರ್ಥ್ಯ ಹೊಂದಿರುವ ಪ್ರದೇಶವಾಗಿದೆ. ಈ ಭಾಗವು ರಾಜ್ಯ ಸರ್ಕಾರಕ್ಕೆ ಪ್ರತಿವರ್ಷ ನೂರಾರು ಕೋಟಿ ರೂಪಾಯಿ ಲಾಭಾಂಶ ಹಾಗೂ ರಾಯಲ್ಟಿ ರೂಪದಲ್ಲಿ ಆದಾಯ ತಂದುಕೊಡುತ್ತಿದೆ. ದೇಶದಲ್ಲಿಯೇ ಅತಿ ಹೆಚ್ಚು ಚಿನ್ನ ಉತ್ಪಾದಿಸುವ ಪ್ರದೇಶಗಳಲ್ಲಿ ಹಟ್ಟಿ ಚಿನ್ನದ ಗಣಿ ಪ್ರಮುಖ ಸ್ಥಾನದಲ್ಲಿದ್ದು, ರಾಜ್ಯದ ಆರ್ಥಿಕ



ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತಿದೆ. ಹಟ್ಟಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿನ್ನದ ನಿಕ್ಷೇಪ ಅಪಾರ ಪ್ರಮಾಣದಲ್ಲಿದ್ದು, ಈಗಾಗಲೇ ಭಾರತೀಯ ಭೂವೈಜ್ಞಾನಿಕ ಸಮೀಕ್ಷಾ ಇಲಾಖೆ ಹಲವು ಹೊಸ ಗಣಿಗಾರಿಕಾ ವಲಯಗಳನ್ನು ಗುರುತಿಸಿದೆ. ಮುಂದಿನ ದಿನಗಳಲ್ಲಿ ಹತ್ತಿ ಗೋಲ್ಡ್ ಮೈನ್ಸ್ ಕಂಪನಿ ವತಿಯಿಂದ ವ್ಯಾಪಕ ಗಣಿಗಾರಿಕೆ ಕಾರ್ಯ ಆರಂಭಗೊಳ್ಳುವ ನಿರೀಕ್ಷೆಯಿದ್ದು, ಇದರಿಂದ ಸಾವಿರಾರು ನೇರ ಮತ್ತು ಪರೋಕ್ಷ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ.

ಈಗಾಗಲೇ ಹಟ್ಟಿ ಕ್ಯಾಂಪ್ ಹಾಗೂ ಹಟ್ಟಿ ಪಟ್ಟಣದ ಜನಸಂಖ್ಯೆ ಐವತ್ತು ಸಾವಿರಕ್ಕಿಂತ ಹೆಚ್ಚಿದ್ದು, ಮುಂದಿನ ಕೆಲವು ವರ್ಷಗಳಲ್ಲಿ ಇದು ದೊಡ್ಡ ನಗರವಾಗಿ ರೂಪುಗೊಳ್ಳುವ ಎಲ್ಲಾ ಸಾಧ್ಯತೆಗಳಿವೆ. ಆದರೆ ಪಟ್ಟಣದ ಅಭಿವೃದ್ಧಿಗೆ ಅತ್ಯಗತ್ಯವಾದ ರಸ್ತೆ ಸಂಪರ್ಕ ಸೌಲಭ್ಯ ಸಮರ್ಪಕವಾಗಿ ಲಭ್ಯವಿಲ್ಲ. ರಾಷ್ಟ್ರೀಯ ಹೆದ್ದಾರಿಯಿಂದ ಹಟ್ಟಿ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ಸೂಕ್ತ ಫೀಡರ್ ರಸ್ತೆ ಇಲ್ಲದಿರುವುದರಿಂದ ಸಾರ್ವಜನಿಕರು, ಕಾರ್ಮಿಕರು, ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ವ್ಯಾಪಾರಸ್ಥರು ನಿತ್ಯ ಸಂಚಾರದಲ್ಲಿ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಮಳೆಗಾಲದಲ್ಲಿ ರಸ್ತೆ ಸಮಸ್ಯೆ ಮತ್ತಷ್ಟು ಗಂಭೀರವಾಗುತ್ತಿದ್ದು, ತುರ್ತು ಆರೋಗ್ಯ ಸೇವೆಗಳಿಗೂ ಅಡಚಣೆ ಉಂಟಾಗುತ್ತಿದೆ.

ಫೀಡರ್ ರಸ್ತೆ ನಿರ್ಮಾಣವಾದರೆ ಹಟ್ಟಿ ಪಟ್ಟಣಕ್ಕೆ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ಗಣಿಗಾರಿಕೆ, ಕೈಗಾರಿಕೆ, ವ್ಯಾಪಾರ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳ ಅಭಿವೃದ್ಧಿಗೂ ಹೊಸ ವೇಗ ಸಿಗಲಿದೆ. ಇದರಿಂದ ಸುತ್ತಮುತ್ತಲಿನ ಗ್ರಾಮಗಳ ಜನರಿಗೂ ಅನುಕೂಲವಾಗಲಿದೆ. ಹಟ್ಟಿ ಪಟ್ಟಣದ ಜನರ ಬಹುಕಾಲದ ಬೇಡಿಕೆಯಾಗಿರುವ ಈ ರಸ್ತೆ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಆದ್ಯತೆಯ ಮೇರೆಗೆ ಮಂಜೂರು ಮಾಡಿ ಶೀಘ್ರ ಕಾಮಗಾರಿ ಆರಂಭಿಸಬೇಕೆಂದು ನಾಗರಿಕ ಸಮಿತಿ ಸಂಸದರಲ್ಲಿ ಒತ್ತಾಯಿಸಿತು. ಮನವಿ ಸ್ವೀಕರಿಸಿದ ಸಂಸದರು ಸಮಸ್ಯೆಯ ಗಂಭೀರತೆಯನ್ನು ಅರಿತು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ನಾಗರಿಕ ಸಮಿತಿಯ ಪದಾಧಿಕಾರಿಗಳು, ಗಣಿಗಾರಿಕಾ ಪ್ರದೇಶದ ಮುಖಂಡರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

## ರವಿವಾರದಂದು ಮುಖ್ಯಗುರು ಅಮರೇಗೌಡ ಮಾ.ಪಾ ವಯೊನಿವೃತ್ತಿ ಅದ್ದೂರಿ ಸಮಾರಂಭ

❏ ನ್ಯೆಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲ್ಲೂಕ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹೂವಿನಬಾವಿ ಗ್ರಾಮದ ಅಮರೇಗೌಡ ಮಾಲಿ ಪಾಟೀಲ್ ಮುಖ್ಯ ಗುರುಗಳು 28 ವರ್ಷಗಳ ಕಾಲ ಶಿಕ್ಷಕ ವೃತ್ತಿಯಲ್ಲಿ ಶಿಕ್ಷಕರಾಗಿ,ಮುಖ್ಯಗುರುಗಳಾಗಿ,ಶಿಕ್ಷಣ ಇಲಾಖೆಯ ಅಧಿಕಾರಿಗಳಿಂದ ಪ್ರಶಂಸೆ, ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ,**



ವಿವಿಧ ಸಂಘ ಸಂಸ್ಥೆಗಳಿಂದ ಉತ್ತಮ ಶಿಕ್ಷಕ ರತ್ನ, ಹೀಗೆ ಸುಧೀರ್ಘ ಶಿಕ್ಷಕ ವೃತ್ತಿಯಲ್ಲಿ ಮಕ್ಕಳ ಕಲಿಕೆ ಮತ್ತು ಶಾಲಾ ಅಭಿವೃದ್ಧಿ ವಿಚಾರದಲ್ಲಿ ಹಲವಾರು ಶೈಕ್ಷಣಿಕ ಚಟುವಟಿಕೆಗಳ ಮೂಲಕ ತಾಲ್ಲೂಕಿಗೆ ಶಾಲೆಯನ್ನು ಪ್ರಸಿದ್ಧಿ ಪಡೆಯುವಲ್ಲಿ ಅಮರೇಗೌಡ ಮಾ.ಪಾ ಹಾಗೂ ಶಿಕ್ಷಕವೃಂದದಿಂದ ಇಂದು ಹೂವಿನಬಾವಿ ಶಾಲೆ ಮಾದರಿ ಶಾಲೆಯಾಗಿದೆ,ಹೀಗಾಗಿ ರವಿವಾರ ಶ್ರೀ ಗವಿಸಿದ್ದೇಶ್ವರ ದೇವಸ್ಥಾನದಲ್ಲಿ ವಯೊನಿವೃತ್ತಿ ಸನ್ಮಾನ ಸಮಾರಂಭವನ್ನು ಅದ್ದೂರಿಯಾಗಿ ಹಮ್ಮಿಕೊಂಡಿದ್ದು,ಅದಕ್ಕೆ ಎಲ್ಲರೂ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಮುಖ್ಯಗುರುಗಳು,ಶಾಲಾ ಎಸ್ ಡಿ ಎಮ್ ಸಿ ಅದ್ಯಕ್ಷರು,ಸರ್ವ ಸದಸ್ಯರು, ಹಳೆಯ ವಿದ್ಯಾರ್ಥಿಗಳು ಸಂಘದ ಅದ್ಯಕ್ಷರು , ಸರ್ವ ಸದಸ್ಯರು,ಗ್ರಾಮಸ್ಥರು ಸೇರಿ ಪತ್ರಿಕೆಗೆ ಮಾಹಿತಿ ತಿಳಿಸಿದರು.

## ದೇವದುರ್ಗ ದುರಂತ ಸ್ಥಳಕ್ಕೆ ಸಂಸದ ಜಿ. ಕುಮಾರ ನಾಯಕ ಭೇಟಿ ? ಮೃತರ ಕುಟುಂಬಕ್ಕೆ ಪರಿಹಾರ ಕಲ್ಪಿಸಲು ಸರ್ಕಾರದೊಂದಿಗೆ ಚರ್ಚೆ

# ಕಟ್ಟಡ ಮಾಲೀಕರ ವಿರುದ್ಧ ಕಾನೂನು ಕ್ರಮಕ್ಕೆ ಅಧಿಕಾರಿಗಳಿಗೆ ಸೂಚನೆ.

❏ ನ್ಯೆಜ್ಯ ದೆಸೆ ನ್ಯೂಸ್

**ದೇವದುರ್ಗ: ಮೃತರ ಕುಟುಂಬಕ್ಕೆ ಅಗತ್ಯ ನೆರವು ಹಾಗೂ ನ್ಯಾಯವನ್ನು ದೊರಕಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ: ಸಂಸದ ಜಿ ಕುಮಾರ ನಾಯಕ.**

ದೇವದುರ್ಗ ಪಟ್ಟಣದಲ್ಲಿ ಕಟ್ಟಡದ ಮೇಲ್ಛಾವಣಿ ಕುಸಿದು ಮೂವರು ಯುವಕರು ಮೃತಪಟ್ಟ ದುರಂತ ಸ್ಥಳಕ್ಕೆ ರಾಯಚೂರು?ಯಾದಗಿರಿ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀ ಜಿ. ಕುಮಾರ ನಾಯಕ ಅವರು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು,ದುರಂತದ ಕುರಿತು ಸ್ಥಳದಲ್ಲಿದ್ದ ಅಧಿಕಾರಿಗಳಿಂದ ಸಂಪೂರ್ಣ ಮಾಹಿತಿ ಪಡೆದುಕೊಂಡ ಸಂಸದರು, ಘಟನೆಗೆ ಕಾರಣವಾದ ಅಂಶಗಳ ಬಗ್ಗೆ ಸವಿಸ್ತಾರವಾಗಿ ವಿಚಾರಣೆ ನಡೆಸಿದರು. ಮೃತರ ಕುಟುಂಬಗಳಿಗೆ ತಮ್ಮ ಆಳವಾದ ಸಂತಾಪವನ್ನು ಸೂಚಿಸಿದ ಅವರು,

ಈ ದುರ್ಘಟನೆಯಲ್ಲಿ ಮೃತಪಟ್ಟ ಯುವಕರ ಕುಟುಂಬಗಳಿಗೆ ಸರ್ಕಾರದಿಂದ



ಸೂಕ್ತ ಪರಿಹಾರ ದೊರಕುವಂತೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ವೈಯಕ್ತಿಕವಾಗಿ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಅಲ್ಲದೆ, ಈ ದುರಂತಕ್ಕೆ ಕಾರಣವಾದ ಕಟ್ಟಡದ ಮಾಲೀಕರು ಹಾಗೂ ಸಂಬಂಧಪಟ್ಟವರ ವಿರುದ್ಧ ಕಾನೂನುಬದ್ಧವಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಘಟನೆ ಕುರಿತು ಸಮಗ್ರ ತನಿಖೆ ನಡೆಸಿ, ನಿರ್ಲಕ್ಷ್ಯ ಕಂಡುಬಂದರೆ ತಪ್ಪಿತಸ್ಥರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕ್ರಮ ಜರುಗಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಭವಿಷ್ಯದಲ್ಲಿ ಇಂತಹ ದುರ್ಘಟನೆಗಳು ಮರುಕಳಿಸದಂತೆ ಪಟ್ಟಣ ವ್ಯಾಪ್ತಿಯಲ್ಲಿರುವ ಶಿಥಿಲಾವಸ್ಥೆಯ



ಕಟ್ಟಡಗಳ ಸಮೀಕ್ಷೆ ನಡೆಸಿ, ಸಾರ್ವಜನಿಕರ ಸುರಕ್ಷತೆಗೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀ ರಾಜಶೇಖರ್ ನಾಯಕ್, ಶ್ರೀ ರಾಮಣ್ಣ ಇರಬಗೇರಾ, ಶ್ರೀ ಶರಣಗೌಡ ಗೌರಂಪೇಟೆ, ಶ್ರೀ ಜಯಂತರಾವ್ ಪತಂಗೆ, ಶ್ರೀ ಆದನಗೌಡ ಬುಂಕಲದೊಡ್ಡಿ,ಶ್ರೀ ಶಿವರಾಜ ಗೆಜ್ಜೆಬಾವಿ, ದೇವದುರ್ಗ ತಹಶೀಲ್ದಾರ್ ಶ್ರೀ ಮತಿ ನಾಗಮ್ಮ ಕಟ್ಟಿಮನಿ, ಪುರಸಭೆಯ ಪೌರಾಯುಕ್ತರು ಪೋಲಿಸ್ ಇಲಾಖೆಯ ಸಿಬ್ಬಂದಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರು ಹಾಜರಿದ್ದರು..

## ವೈದ್ಯರ ಮೇಲೆ ದೂಷಣೆ ಸಲ್ಲದು: ಡಾ.ನಾಲಬಂದ

❏ ನ್ಯೆಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಡಾ.ಅನಂದ ಭಟ್ ಅವರು ಪಟ್ಟಣದ ವೈದ್ಯಲೋಕದ ಅಪರೂಪದ ವ್ಯಕ್ತಿಯಾಗಿದ್ದಾರೆ. ಅವರ ಸಮಯ ಪ್ರಜ್ಞೆ,ಹಸಿರು ಪ್ರೀತಿ, ಉತ್ತಮ ಹವ್ಯಾಸಗಳು, ಹಾಗೂ ಯಾವುದೇ ಸಮಸ್ಯೆಗಳಿರಲಿ ಅವುಗಳನ್ನು ಸುಲಭವಾಗಿ ಬಗೆಹರಿಸಿ ಎಲ್ಲರನ್ನೂ ಒಂದುಗೂಡಿಸುವ ವಿಶಿಷ್ಟ ವ್ಯಕ್ತಿತ್ವ ಹಾಗೂ ಎಲ್ಲರೊಂದಿಗೆ ಸಮವಾಗಿ ಬೆರೆವ ಭಾವ ಎಲ್ಲರ ಮೆಚ್ಚುಗೆ ಪಡೆದಿದೆ ಎಂದು ತಾಳಿಕೋಟೆ ವೈದ್ಯರ ಸಂಘದ ಅಧ್ಯಕ್ಷ ಡಾ.ಎ.ಎ.ನಾಲಬಂದ ಹೇಳಿದರು.**




ಅವರು ಪಟ್ಟಣದಲ್ಲಿ ನೂತನ ಸಾಯಿ ಆಸ್ಪತ್ರೆ ಸಭಾಭವನದಲ್ಲಿ ಆಯೋಜಿಸಿದ್ದ ವೈದ್ಯರ ದಿನದ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ವೈದ್ಯ ದಂಪತಿ ಡಾ.ಆನಂದ ಭಟ್ಟ, ಡಾ.ಪ್ರಿಯಾ ಆನಂದ ಭಟ್ಟ ಅವರನ್ನು ಗೌರವಿಸಿ ಬುಧವಾರ ಮಾತನಾಡಿದರು. ವೈದ್ಯಕೀಯ ತ್ಯಾಜ್ಯಗಳ ನಿರ್ವಹಣೆಯ ಘಟಕಕ್ಕಾಗಿ ಒಂದು ಎಕರೆ ಸ್ಥಳಾವಕಾಶ ಒದಗಿಸುವಂತೆ ಪುರಸಭೆಗೆ ಮನವಿ ಸಲ್ಲಿಸಿರುವುದಾಗಿ ತಿಳಿಸಿದರು. ಗೌರವಾಧ್ಯಕ್ಷ ಡಾ,ವಿ.ಎಸ್.ಕಾರ್ಚಿ ಅವರು ಮಾತನಾಡಿ, ವೈದ್ಯಕಿಯ ಲೋಕದಲ್ಲಿ ಹಿಂದೆ ಯಾವ ಆಧುನಿಕ ಸಲಕರಣೆಗಳು, ಸೌಲಭ್ಯಗಳೂ ಲಭ್ಯವಾಗದ ದಿನಗಳಲ್ಲಿ ಎದುರಿಸಿದ ಅನುಭವಗಳನ್ನು ಹಂಚಿಕೊಂಡರು. ಸನ್ಮಾನಿತರಾಧ ಡಾ.ಆನಂದ ಭಟ್ ಮಾತನಾಡಿ, ರೋಗಿಯ ಜೀವರಕ್ಷಣೆಯ ಶಪಥ ತೊಟ್ಟು ಬಂದಿರುವ ಜೀವ ಉಳಿಸುವ ಕಾರ್ಯದಲ್ಲಿರುವ ವೈದ್ಯರಿಗೆ ವಿನಾಕಾರಣ ದೂಷಣೆಗಳು ಎದುರಾಗುತ್ತಿವೆ. ಅವುಗಳನ್ನು ಎದುರಿಸಿ ನಮ್ಮ ಪ್ರಾಮಾಣಿಕ ಕಾರ್ಯದಲ್ಲಿ ತೊಡಗಿಕೊಳ್ಳಬೇಕಿದೆ ಎಂದರು. ಡಾ.ರವಿ ಅಗರವಾಲ, ಡಾ.ಶ್ರೀಶೈಲ ಹುಕ್ಕೇರಿ ಮಾತನಾಡಿದರು. ವೇದಿಕೆಯಲ್ಲಿ ಭಾರತೀಯ ವೈದ್ಯಕೀಯ ಅಸೋಶಿಯೇಶನ್ ನ ತಾಲ್ಲೂಕು ಘಟಕದ ಅಧ್ಯಕ್ಷೆ ಡಾ.ಗಂಗಾಂಬಿಕಾ ಪಾಟೀಲ, ವೈದ್ಯರ ಸಂಘದ ಖಜಾಂಚಿ ಡಾ.ಸುವರ್ಣಾ ಸಲ್ಲೊಡಗಿ, ಉಪಖಜಾಂಚಿ ಡಾ.ಶಾಂತಾ ಇಬ್ರಾಹಿಂಪುರ ಕಾರ್ಯದರ್ಶಿ ಡಾ.ವಿಜಯಕುಮಾರ ಅಮಲ್ಯಾಳ ವೇದಿಕೆಯಲ್ಲಿದ್ದರು. ಒಟ್ಟು 58 ಜನ ವೈದ್ಯರು ಅವರ ಪರಿವಾರದವರು ವೈದ್ಯರ ದಿನ ಆಚರಣೆಯಲ್ಲಿ ಪಾಲ್ಗೊಂಡಿದ್ದರು.

## ಆರ್.ಎಚ್. ನಂ. 04 ಸರ್ಕಾರಿ ಪ್ರೌಢಶಾಲೆಗೆ ನೂತನ ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ

❏ ನ್ಯೆಜ್ಯ ದೆಸೆ ನ್ಯೂಸ್

**ಸಿಂಧನೂರು: ಕೆ.ಕೆ.ಆರ್.ಡಿ.ಬಿ. (ಮೈಕ್ರೋ) ಯೋಜನೆಯಡಿ ರೂಪಾಯಿ 250.00 ಲಕ್ಷಗಳ ವೆಚ್ಚದಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಆರ್.ಎಚ್. ನಂ. 04 ಸರ್ಕಾರಿ ಪ್ರೌಢಶಾಲೆಯ ನೂತನ ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಮಾನ್ಯ ಶಾಸಕರ ಮೊಮ್ಮಗ ಶ್ರೀ ಬಸನಗೌಡ ಬಾದರ್ಲಿ ಅವರು ಭೂಮಿ ಪೂಜೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀ ಬಸನಗೌಡ ಬಾದರ್ಲಿ ಅವರು,**

ಶಿಕ್ಷಣವು ಪ್ರತಿಯೊಬ್ಬ ವಿದ್ಯಾರ್ಥಿಯ ಬದುಕಿನ ಅಡಿಪಾಯವಾಗಿದ್ದು, ಉತ್ತಮ ಶಿಕ್ಷಣಕ್ಕಾಗಿ ಉತ್ತಮ ಮೂಲಸೌಕರ್ಯ ಅವಶ್ಯಕ ಎಂದು ಹೇಳಿದರು. ಗ್ರಾಮೀಣ ಪ್ರದೇಶದ ಮಕ್ಕಳಿಗೂ ನಗರ ಮಟ್ಟದ ಶಿಕ್ಷಣ ಸೌಲಭ್ಯಗಳು ದೊರಕಬೇಕು ಎಂಬುದು ಸರ್ಕಾರದ ಉದ್ದೇಶವಾಗಿದ್ದು,



ಅದಕ್ಕೆ ಅನುಗುಣವಾಗಿ ಶಾಲೆಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗುತ್ತಿದೆ ಎಂದರು. ಈ ನೂತನ ಕಟ್ಟಡ ನಿರ್ಮಾಣದಿಂದ ವಿದ್ಯಾರ್ಥಿಗಳಿಗೆ ವಿಶಾಲವಾದ ಮತ್ತು ಸುಸಜ್ಜಿತ ತರಗತಿ ಕೊಠಡಿಗಳು, ಸುರಕ್ಷಿತ ಕಲಿಕಾ ವಾತಾವರಣ ಹಾಗೂ ಅಗತ್ಯ ಮೂಲಸೌಕರ್ಯಗಳು ಲಭ್ಯವಾಗಲಿವೆ.

ಶಾಲೆಯ ಶೈಕ್ಷಣಿಕ ಚಟುವಟಿಕೆಗಳು ಇನ್ನಷ್ಟು ಪರಿಣಾಮಕಾರಿಯಾಗಿ ನಡೆಯಲು ಇದು ಸಹಕಾರಿಯಾಗಲಿದೆ. ಪ್ರಸ್ತುತ ಶಿಕ್ಷಣ ಕ್ಷೇತ್ರದಲ್ಲಿ ಸ್ಪರ್ಧಾತ್ಮಕ ವಾತಾವರಣ ಹೆಚ್ಚುತ್ತಿರುವ ಸಂದರ್ಭದಲ್ಲಿ, ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣ ಒದಗಿಸುವುದು ಕಾಲದ ಅಗತ್ಯವಾಗಿದೆ. ಶಾಲಾ ಕಟ್ಟಡ, ಪ್ರಯೋಗಾಲಯ, ಗ್ರಂಥಾಲಯ ಹಾಗೂ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯಿಂದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿ, ಶೈಕ್ಷಣಿಕ ಸಾಧನೆ ಮತ್ತಷ್ಟು ಉತ್ತಮವಾಗಲಿದೆ ಎಂದು ಹೇಳಿದರು. ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದ್ದು, ಶಿಕ್ಷಣ, ಆರೋಗ್ಯ, ರಸ್ತೆ ಹಾಗೂ ಕುಡಿಯುವ ನೀರಿನಂತಹ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ವಿಶೇಷ ಅನುದಾನ ನೀಡಲಾಗುತ್ತಿದೆ. ಈ ಯೋಜನೆಗಳು ಗ್ರಾಮೀಣ ಭಾಗದ ಜನರ ಜೀವನಮಟ್ಟವನ್ನು ಸುಧಾರಿಸಲು ನೆರವಾಗುತ್ತಿವೆ.

ಗುಣಮಟ್ಟದ ಶಿಕ್ಷಣಕ್ಕೆ ಅಗತ್ಯವಾದ ಮೂಲಸೌಕರ್ಯ ಕಲ್ಪಿಸುವ ಸಂಕಲ್ಪದೊಂದಿಗೆ ಆರಂಭಗೊಂಡಿರುವ ಈ ಕಾಮಗಾರಿ, ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ಮತ್ತೊಂದು ಬಲಿಷ್ಠ ಅಡಿಗಲ್ಲಾಗಲಿದೆ. ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯೇ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಮೂಲಾಧಾರವಾಗಿದ್ದು, ಇಂತಹ ಯೋಜನೆಗಳು ಮುಂದಿನ ಪೀಳಿಗೆಯ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಲಿವೆ. ಗ್ರಾಮಸ್ಥರು ಕೂಡ ಶಾಲೆಯ ಅಭಿವೃದ್ಧಿಗೆ ಸಂತಸ ವ್ಯಕ್ತಪಡಿಸಿ, ನೂತನ ಕಟ್ಟಡ ನಿರ್ಮಾಣದಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದ, ಶಿಕ್ಷಣ ಇಲಾಖೆ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಸದಸ್ಯರು, ಸ್ಥಳೀಯ ಮುಖಂಡರು, ಪಾಲಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ದೇಶಪ್ರೇಮ ಬೆಳೆಸುವ ಭಾರತ ಸೇವಾದಳ – ಮಾರುತಿ

❏ ನ್ಯೆಜ್ಯ ದೆಸೆ ನ್ಯೂಸ್

**ಮಾನವಿ: ದೇಶಪ್ರೇಮ, ಶಿಸ್ತು, ಸೇವಾ ಮನೋಭಾವ ಹಾಗೂ ಭಾವೈಕ್ಯತೆಯನ್ನು ವಿದ್ಯಾರ್ಥಿಗಳು ಮತ್ತು ಯುವಜನರಲ್ಲಿ ಬೆಳೆಸುವಲ್ಲಿ ಭಾರತ್ ಸೇವಾದಳದ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ತಾಲೂಕು ಪ್ರಭಾರಿ ದೈಹಿಕ ಶಿಕ್ಷಣಾಧಿಕಾರಿ ಮಾರುತಿ ಹೇಳಿದರು.**

ನಗರದ ಕನ್ಯಾ ಶಾಲೆಯ ಸಭಾಂಗಣದಲ್ಲಿ ಭಾರತ್ ಸೇವಾದಳ ರಾಯಚೂರು ಹಾಗೂ ಶಾಲಾ ಶಿಕ್ಷಣ ಇಲಾಖೆ ರಾಯಚೂರು ಇವರ ಆಶ್ರಯದಲ್ಲಿ ಭಾರತ್ ಸೇವಾದಳ ತರಬೇತಿ ಪಡೆದ ಶಿಕ್ಷಕರಿಗಾಗಿ ಹಮ್ಮಿಕೊಂಡಿದ್ದ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು



ಉದ್ಘಾಟಿಸಿ ಅವರು ಮಾತನಾಡಿದರು. ರಾಷ್ಟ್ರೀಯ ಹಬ್ಬಗಳ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪಥಸಂಚಲನ, ರಾಷ್ಟ್ರಗೀತೆ ಹಾಗೂ ದೇಶಭಕ್ತಿ ಗೀತೆಗಳ ಅಭ್ಯಾಸವನ್ನು ನೀಡುವ ಮೂಲಕ ಸೇವಾದಳದ ಚಟುವಟಿಕೆಗಳನ್ನು ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ನಡೆಸಬೇಕು ಎಂದು ಅವರು ತಿಳಿಸಿದರು.

ತಾಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಮೌನೇಶ್ ಮಾತನಾಡಿ, ಭಾರತ್ ಸೇವಾದಳವು ಕಳೆದ 75 ವರ್ಷಗಳಿಂದ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಯುವಜನರಿಗೆ ತರಬೇತಿ ನೀಡುತ್ತಾ ದೇಶಾಭಿಮಾನ ಮತ್ತು ರಾಷ್ಟ್ರೀಯ ಮೌಲ್ಯಗಳನ್ನು ಬೆಳೆಸುವ ಕಾರ್ಯವನ್ನು ನಿರಂತರವಾಗಿ ನಡೆಸುತ್ತಿದೆ.

ತಾಲೂಕಿನಲ್ಲಿ ಸೇವಾದಳದ ಚಟುವಟಿಕೆಗಳನ್ನು ಇನ್ನಷ್ಟು ವಿಸ್ತರಿಸುವ ಅಗತ್ಯವಿದೆ ಎಂದು ಹೇಳಿದರು. ಭಾರತ್ ಸೇವಾದಳ ತಾಲೂಕು ಸಂಘಟಕ ಬಸವರಾಜ್ ಮಾಡಗೇರಿ ಮಾತನಾಡಿ, ಸೇವಾದಳದ ಕಾರ್ಯಕ್ರಮಗಳು ದೈಹಿಕ ಶಿಕ್ಷಣಕ್ಕೆ ಪೂರಕವಾಗಿದ್ದು, ರಾಷ್ಟ್ರೀಯ ಹಬ್ಬಗಳು ಹಾಗೂ ರಾಷ್ಟ್ರ ನಾಯಕರ ಜಯಂತಿಗಳ ಸಂದರ್ಭದಲ್ಲಿ ಶಾಲೆಗಳಲ್ಲಿ ಸೇವಾದಳದ ಚಟುವಟಿಕೆಗಳನ್ನು ಕಡ್ಡಾಯವಾಗಿ ಆಯೋಜಿಸಬೇಕು ಎಂದು ತಿಳಿಸಿದರು. ಭಾರತ್ ಸೇವಾದಳ ವಿಭಾಗ ಸಂಘಟಕ ವಿದ್ಯಾಸಾಗರ್ ಚಿಣಮಗೇರಿ ಅವರು ಪ್ರಸಕ್ತ ಸಾಲಿನ ಸೇವಾದಳದ ಕಾರ್ಯಕ್ರಮಗಳು ಹಾಗೂ ಸಂಘಟನೆಯ ವಿವಿಧ ಚಟುವಟಿಕೆಗಳ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು. ಭಾರತ್ ಸೇವಾದಳ ತಾಲೂಕು ಕಾರ್ಯದರ್ಶಿ ಮಹಿಬೂಬ್ ಮದ್ಲಾಪುರ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಶ್ರೀಧರ ಗೌಡ ವಂದಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳ ಭಾರತ್ ಸೇವಾದಳ ಶಾಖೆಗಳ ನವೀಕರಣ ಕಾರ್ಯವೂ ನೆರವೇರಿತು. ಶಿಕ್ಷಕರು ಹಾಗೂ ಸೇವಾದಳದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ನವ ದಾಂಪತ್ಯಕ್ಕೆ ಕಾಲಿಟ್ಟ ಮೂಕ ವಧು–ವರ : ಮದುವೆ ಸಂಭ್ರಮಕ್ಕೆ ಕಂಪ್ಲಿ ಸಾಕ್ಷಿ

❏ ನ್ಯೆಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಮದುವೆ ಎಂದರೆ ಅಲ್ಲಿ ಬೀಗರ ಗೌಜು ಗದ್ದಲ ಇದ್ದೇ ಇರುತ್ತದೆ. ಆದರೆ, ಮಾತು ಬೆಳ್ಳಿ, ಮೌನ ಬಂಗಾರ ಎನ್ನುವಂತೆ ಮೂಕ ವಧು–ವರ ಮದುವೆ ಸಂಭ್ರಮಕ್ಕೆ ಪಟ್ಟಣದ ರಾಘವೇಂದ್ರ ಕಲ್ಯಾಣಮಂಟಪ ಶುಕ್ರವಾರ ಸಾಕ್ಷಿಯಾಯಿತು.**

ಗ್ರಾಮ, ತಾಲೂಕು, ಜಿಲ್ಲೆ, ರಾಜ್ಯ ಸೇರಿದಂತೆ ನಾನಾ ಭಾಗಗಳಿಂದ ಆಗಮಿಸಿದ್ದ ಮೂಕರು ದಾಂಪತ್ಯ ಜೀವನಕ್ಕೆ ಕಾಲಿಟ್ಟ ನೂತನ ದಂಪತಿಗೆ ಅವರದೇ ಹಾವಭಾವದ ಭಂಗಿಯಲ್ಲಿ ಶುಭ ಹಾರೈಕೆ, ಆಶೀರ್ವಾದ ಮಾಡಿದ ದೃಶ್ಯಗಳು ನೆರೆದ ಜನರನ್ನು ಬೆರಗುಗೊಳಿಸಿದವು. ಕಂಪ್ಲಿ ತಾಲೂಕಿನ ರಾಮಸಾಗರ ಗ್ರಾಮದ ಹೆಬ್ಬಾಳ್ ಚಂದ್ರಕಲಾ ವೆಂಕಟೇಶ ದಂಪತಿಯ ಪದವೀಧರ ಪುತ್ರ ಹೆಚ್.ನವೀನ್‌ಕುಮಾರ ಹಾಗೂ ಗುಲಬರ್ಗಾ ಜಿಲ್ಲೆಯ ಚಿತ್ತಪುರ ನಗರದ ನಿವಾಸಿ ಈರಮ್ಮ ಬಸಣ್ಣ ಸಿಂಪಿ ಇವರ ಪುತ್ರಿ ವಾಸವಿ(ಉಮಾದೇವಿ) ಇವರ ಮದುವೆ ಸಂಭ್ರಮಕ್ಕೆ ನೂರಾರು ಜನರು ಸಾಕ್ಷಿಯಾದರು.

ಇಲ್ಲಿನ ಕಲ್ಯಾಣಮಂಟಪದಲ್ಲಿ ಎತ್ತ ನೋಡಿದರತ್ತ ಮೂಕರ ಕಲರವ ಕಂಡುಬಂದಿತು. ವಧು–ವರನ ಮೂಕ ಗೆಳೆಯ–ಗೆಳತಿಯರು ಹಾಗೂ ಆಪ್ತ ಮಿತ್ರರು ಸೇರಿದಂತೆ 100ಕ್ಕೂ ಹೆಚ್ಚು ಮೂಕರು ಮದುವೆ ಮುನ್ನಾ ದಿನವಾದ ಗುರುವಾರ ಸಂಜೆಯೇ ಕಲ್ಯಾಣ ಮಂಟಪಕ್ಕೆ ಆಗಮಿಸಿ ವಾಸ್ತವ್ಯ ಹೂಡಿದ್ದರು. ಮರು ದಿನದ ಮದುವೆ ಮುಗಿಯುವ ತನಕ ಗೆಳೆಯನ ಅದ್ಧೂರಿ ಮದುವೆ ನಡೆಸಿಕೊಟ್ಟರು. ಮದುವೆ ಬರುವವರನ್ನು ಸ್ವಾಗತಿಸುವುದು, ಊಟದ ವ್ಯವಸ್ಥೆ ನೋಡಿಕೊಳ್ಳುವುದು, ಹೀಗೆ ನಾನಾ ವಿವಿಧ ಮೂಕರು ತಮ್ಮದೇ ಆದ ಕೆಲಸದೊಂದಿಗೆ ನಾವಿದ್ದೇವೆ ಎಂಬ ಭಾವನೆಯೊಂದಿಗೆ ಗೆಳೆಯನ ಮದುವೆಯನ್ನು ಅಚ್ಚುಕಟ್ಟಾಗಿ ನೆರವೇರಿಸಿದರು. ಮದುವೆಯಲ್ಲಿ ಮಾತೇ ವಿರಳ ಎನ್ನುವಂತಿತ್ತು. ಅಲ್ಲಿ ನೆರೆದಿದ್ದ ಮೂಕರೆಲ್ಲರೂ ಕೈ ಸನ್ನೆಗಳ ಮೂಲಕವೇ



ಸಂವಹಿಸಿದ್ದಲ್ಲದೇ ಮದುವೆ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದ್ದ ದೃಶ್ಯಗಳು ಕಂಡುಬಂದವು. ಮೂಕ ಗೆಳೆಯ ಗೆಳತಿಯರೇ ಮದುಮಕ್ಕಳನ್ನು ಅಲಂಕರಿಸಿ ಮದುವೆ ಮಂಟಪಕ್ಕೆ ಕರೆ ತಂದರು.

ಸರಿಯಾಗಿ ಮಧ್ಯಾಹ್ನ 12.20ಕ್ಕೆ ಮೂಕ ಹಕ್ಕಿಗಳ ಅಕ್ಷತಾರೋಪಣ ನೆರವೇರಿತು. ನಂತರ ವಧು ವರನ ಮೂಕ ಗೆಳೆಯ, ಗೆಳತಿಯರು ತಮ್ಮದೇ ದಾಟಿಯಲ್ಲಿ ನವ ವಿವಾಹಿತರಿಗೆ ಶುಭ ಹಾರೈಸಿದರು. ಹಾಗೆಯೇ ನವ ದಂಪತಿಯೊಂದಿಗೆ ಮೊಬೈಲ್‌ನಲ್ಲಿ ಸೆಲ್ಫಿ ಸಹ ಕ್ಲಿಕ್ಕಿಸಿಕೊಂಡರು. ಅಲ್ಲದೇ ವಿಡಿಯೊ ಕಾಲ್ ಮೂಲಕ ತಮ್ಮ ದೂರದ ಗೆಳೆಯರೊಂದಿಗೆ ಮದುವೆ ಸಂಭ್ರಮವನ್ನು ತಮ್ಮದೆ ಆದ ದಾಟಿಯಲ್ಲಿ ವಿವರಿಸುತ್ತಿದ್ದರು. ಗುರು ಹಿರಿಯರ, ತಂದೆ ತಾಯಿಗಳ ಹಾಗೂ ವಧು–ವರನ ಒಪ್ಪಿಗೆಯ ಮೇರೆಗೆ ಈ ವಿವಾಹ ನೆರವೇರಿತು. ಆರ್ಯವೈಶ್ಯ ಸಮಾಜ(ಶೆಟ್ರು)ದ ವರ ಹೆಚ್.ನವೀನ್ ಕುಮಾರ ಮತ್ತು ವೀರಶೈವ ಸಮಾಜದ ವಧು ವಾಸವಿ ಎಂಬ ಮೂಕ ಹಕ್ಕಿಗಳು ಸುಂದರ ಜೀವನಕ್ಕಾಗಿ ಜಾತಿ, ಭೇಧ ಇಲ್ಲದೇ ಮದುವೆಗೆ ಸಾಕ್ಷಿಯಾದರು. ವರ ನವೀನ್ ಇವರು ಬಳ್ಳಾರಿಯಲ್ಲಿ ಗುರುಗಳಾದ ವೆಂಕಟೇಶ ದೇಶಪಾಂಡೆ ಮತ್ತು ಗೋವಿಂದಪ್ಪ ಅವರ ಮಾರ್ಗದರ್ಶನದಲ್ಲಿ ಹಿರಿಯ ಮತ್ತು ಮೈಸೂರಿನ ಬುದ್ಧಿಮಾಂಧ್ಯ ಶಾಲೆಯಲ್ಲಿ ಪ್ರೌಢ ಹಂತದಿಂದ ಡಿಪ್ಲೋಮಾವರೆಗೆ ಶಿಕ್ಷಣ ಪಡೆದಿದ್ದಾರೆ. ಈಗ ಬೆಂಗಳೂರಿನ ಅಮೆಜಾನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಇಲ್ಲಿನ ಮೂಕ ಹಕ್ಕಿಗಳ ಮದುವೆಗೆ ಶಾಸಕ ಜೆ.ಎನ್.ಗಣೇಶ್ ಅವರ ಸುಪುತ್ರ ಜೆ.ಎನ್. ಗೋಕುಲ್ ಮತ್ತು ಅಳಿಯ ರಾಜೇಶ್‌ಸಿಂಗ್ ಸೇರಿದಂತೆ ಮುಖಂಡರು, ಸಮಾಜದವರು, ಗೆಳೆಯರು ಮೂಕ ವಧು–ವರರಿಗೆ ಆಶೀರ್ವದಿಸಿದರು. ಪರಸ್ಪರರ ದೌರ್ಬಲ್ಯಗಳನ್ನು ಅರಿತು ಒಂದಾದ ಈ ಜೋಡಿಯ ನಿರ್ಧಾರಕ್ಕೆ ಮತ್ತು ಇವರನ್ನು ಒಂದು ಮಾಡಿದ ಕುಟುಂಬಸ್ಥರಿಗೆ ಸಾರ್ವಜನಿಕರಿಂದ ಭಾರಿ ಮೆಚ್ಚುಗೆ ವ್ಯಕ್ತವಾಗಿದೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MCA (Master of Computer Applications)

ಎಂಬುದು ಕಂಪ್ಯೂಟರ್ ಸೈನ್ಸ್ ಮತ್ತು ಸಾಫ್ಟ್ ವೇರ್ ಡೆವಲಪ್ ಮೆಂಟ್ ನಲ್ಲಿನ 2 ವರ್ಷಗಳ ಸ್ನಾತಕೋತ್ತರ (Postgraduate) ಪದವಿಯಾಗಿದೆ. ಇದು ಅಭ್ಯರ್ಥಿಗಳಿಗೆ ಕೋಡಿಂಗ್, ಸಿಸ್ಟಮ್ ಮ್ಯಾನೇಜ್ಮೆಂಟ್, ಮತ್ತು ಇತ್ತೀಚಿನ ತಂತ್ರಜ್ಞಾನಗಳಲ್ಲಿ ಉದ್ಯೋಗಾವಕಾಶಗಳನ್ನು ನೀಡುತ್ತದೆ. ಈ ಕೋರ್ಸ್ ಅನ್ನು ಸಾಮಾನ್ಯವಾಗಿ ಕರ್ನಾಟಕದಲ್ಲಿ ಕರ್ನಾಟಕ ಕಉಅಇಖ ಅಥವಾ ಏಒಂಖ ಪ್ರವೇಶ ಪರೀಕ್ಷೆಗಳ ಮೂಲಕ ಪ್ರವೇಶ ಪಡೆಯಬಹುದು.ಈ ಕೋರ್ಸ್‌ನ ಪ್ರಮುಖ ವಿವರಗಳು ಈ ಕೆಳಗಿನಂತಿವೆ: ಪ್ರಮುಖಾಂಶಗಳು (Key Details)ಕೋರ್ಸ್ ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು).ಅರ್ಹತೆ (Eligibility): ಯಾವುದೇ ಪದವಿಯಲ್ಲಿ (BCA, BSc, BCom, BA) ಕನಿಷ್ಠ 50% ಅಂಕಗಳನ್ನು ಪಡೆದಿರಬೇಕು. ಪದವಿಯಲ್ಲಿ ಅಥವಾ 10+2 ಹಂತದಲ್ಲಿ ಗಣಿತ (Mathematics) ವಿಷಯವನ್ನು ಓದಿರಬೇಕು. (SC/ST ಅಭ್ಯರ್ಥಿಗಳಿಗೆ 45% ಅಂಕಗಳು ಸಾಕು).ಕಲಿಯುವ ವಿಷಯಗಳು: Artificial Intelligence (AI), Cloud Computing, Machine Learning, Java, Python, Cyber Security, ಮತ್ತು Data Science. ಕರ್ನಾಟಕದ ಪ್ರಮುಖ ಕಾಲೇಜುಗಳು (Top Colleges in Karnataka)ನಿಮ್ಮ ಸಮೀಪವಿರುವ ಕರ್ನಾಟಕ ಭಾಗದಲ್ಲಿ ಮತ್ತು ರಾಜ್ಯದ ಪ್ರಮುಖ ನಗರಗಳಲ್ಲಿ ಈ ಕೋರ್ಸ್ ಲಭ್ಯವಿದೆ:ಬೆಂಗಳೂರು: RV College of Engineering, Presidency College, PES University.ಮಂಗಳೂರು: NMAM Institute of Technology (Nitte), St. Aloysius College.ಮೈಸೂರು: SJCE, NIE.ನೀವು Shiksha.com MCA Overview ಅಥವಾ Careers360 Karnataka Colleges ನಲ್ಲಿ ಕಾಲೇಜುಗಳ ಸಂಪೂರ್ಣ ಪಟ್ಟಿ ಮತ್ತು ಪ್ರವೇಶಾತಿ ಪ್ರಕ್ರಿಯೆಯನ್ನು ಪರಿಶೀಲಿಸಬಹುದು. ಉದ್ಯೋಗಾವಕಾಶಗಳು (Career Opportunities)ಈ ಕೋರ್ಸ್ ಮುಗಿದ ನಂತರ ಸಾಫ್ಟ್ ವೇರ್ ಇಂಜಿನಿಯರ್, ಡೇಟಾ ಅನಾಲಿಸ್ಟ್, ಸಿಸ್ಟಮ್ ಅಡ್ಮಿನಿಸ್ಟ್ರೇಟರ್, ಮತ್ತು ವೆಬ್ ಡೆವಲಪರ್ ಮುಂತಾದ ಉದ್ಯೋಗಗಳು ದೊರೆಯುತ್ತವೆ.

## ಮಾನ್ವಿಯ ನೇತಾಜಿ ಪಿಯು ಕಾಲೇಜಿನಲ್ಲಿ ಪ್ರಥಮ ವರ್ಷದ ವಿಜ್ಞಾನ, ಕಲಾ ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಅದ್ದೂರಿಯಾಗಿ ಸ್ವಾಗತ ಸಮಾರಂಭ

❑ ನೈಜ್ಯ ದೆಸೆ ನ್ಯೂಸ್

ಮಾನವಿ: ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಹಂಪಯ್ಯ ನಾಯಕ, ವಿದ್ಯಾರ್ಥಿಗಳು ತಮ್ಮ ಗುರಿಯ ಬಗ್ಗೆ ಸ್ಪಷ್ಟತೆ ಹೊಂದಿ, ಶಿಸ್ತು ಮತ್ತು ನಿರಂತರ ಅಭ್ಯಾಸದ ಮೂಲಕ ಜೀವನದಲ್ಲಿ ಯಶಸ್ಸು ಸಾಧಿಸಬೇಕು ಎಂದು ಕರೆ ನೀಡಿದರು. ಇಂದಿನ ಅಧ್ಯಯನವೇ ನಾಳಿನ ಉಜ್ವಲ ಭವಿಷ್ಯವನ್ನು ರೂಪಿಸುತ್ತದೆ ಎಂದು ಅವರು ಹೇಳಿದರು.




ಕಾಲೇಜಿನ ಆಡಳಿತಾಧಿಕಾರಿ ಡಾ. ಕೆ. ವಿನಯಾ ಮಾತನಾಡಿ, ಕಳೆದ ನಾಲ್ಕು ವರ್ಷಗಳಿಂದ ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಜಿಲ್ಲೆಯಲ್ಲೇ ಅತ್ಯುತ್ತಮ ಫಲಿತಾಂಶ ದಾಖಲಿಸಿರುವುದಾಗಿ ತಿಳಿಸಿ, ಇದೇ ಸಾಧನೆಯನ್ನು ವಿಜ್ಞಾನ ವಿಭಾಗದಲ್ಲೂ ಮುಂದುವರಿಸಲು ವಿದ್ಯಾರ್ಥಿಗಳು ಮತ್ತು ಪೋಷಕರ ಸಹಕಾರ ಅಗತ್ಯ ಎಂದರು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಸದಸ್ಯರು, ಉಪನ್ಯಾಸಕರು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪೋಷಕರು ಭಾಗವಹಿಸಿದ್ದರು. ಸಮಾರಂಭದ ಕೊನೆಯಲ್ಲಿ ವಿದ್ಯಾರ್ಥಿಗಳಿಂದ ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ಮೂಡಿತು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ರೈತರ ಸಮಸ್ಯೆಗೆ ತಕ್ಷಣ ಸ್ಪಂದಿಸಿದ ರಾಯಚೂರು ಸಂಸದ ಶ್ರೀ ಜಿ. ಕುಮಾರ್ ನಾಯಕ್

❑ ನೈಜ್ಯ ದೆಸೆ ನ್ಯೂಸ್

ದೇವದುರ್ಗ: ಇಂದು ರಾಯಚೂರು ಲೋಕಸಭಾ ಕ್ಷೇತ್ರದ ಮಾನ್ಯ ಸಂಸದರಾದ ಶ್ರೀ ಜಿ. ಕುಮಾರ್ ನಾಯಕ್ ಅವರು ದೇವದುರ್ಗಕ್ಕೆ ಆಗಮಿಸಿದ ಸಂದರ್ಭದಲ್ಲಿ ರೈತರು ತಮ್ಮ ಸಮಸ್ಯೆಗಳನ್ನು ನೇರವಾಗಿ ಅವರ ಮುಂದಿಟ್ಟರು.

ಅವರ ಭೇಟಿ ಕುರಿತು ಅತಿ ಕಡಿಮೆ ಸಮಯದಲ್ಲಿ ಮಾಹಿತಿ ದೊರೆತಿದ್ದರೂ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ದೇವದುರ್ಗ ತಾಲೂಕು ಘಟಕದ ಅಧ್ಯಕ್ಷರಾದ ಮರಿಲಿಂಗ ಪಾಟೀಲ್ ಅವರು ಸಮಯ ವ್ಯರ್ಥ ಮಾಡದೆ ರೈತರ ಪರವಾಗಿ ಧ್ವನಿ ಎತ್ತಿದರು. ಅರಸಿನಿಗಿ 33 ಕೆವಿ ವಿದ್ಯುತ್ ಕೇಂದ್ರ ವ್ಯಾಪ್ತಿಯಲ್ಲಿ ನಿರಂತರವಾಗಿ ಉಂಟಾಗುತ್ತಿರುವ ವಿದ್ಯುತ್ ವ್ಯತ್ಯಯ, ಕಡಿಮೆ ವೋಲ್ಟೇಜ್ ಸಮಸ್ಯೆ ಹಾಗೂ ರೈತರಿಗೆ ಆಗುತ್ತಿರುವ ಅನ್ಯಾಯದ ಕುರಿತು ಸಂಸದರ



ಗಮನ ಸೆಳೆದರು. ರೈತರ ಸಮಸ್ಯೆಯನ್ನು ಗಂಭೀರವಾಗಿ ಆಲಿಸಿದ ಸಂಸದರು ಸ್ಥಳದಲ್ಲೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ, ರೈತರಿಗೆ ಉಂಟಾಗಿರುವ ವಿದ್ಯುತ್ ಸಮಸ್ಯೆಯನ್ನು ಶೀಘ್ರದಲ್ಲಿ ಬಗೆಹರಿಸುವಂತೆ ಕಠಿಣ ಸೂಚನೆ ನೀಡಿದರು.

ಇದರಿಂದ ರೈತರಲ್ಲಿ ಹೊಸ ಭರವಸೆ ಮೂಡಿತು. ಈ ವೇಳೆ ರಾಯಚೂರು ಜಿಲ್ಲೆಯಲ್ಲಿ ಸಮರ್ಪಕ ಮಳೆಯಾಗದ ಕಾರಣ ಕೃಷಿ ಚಟುವಟಿಕೆಗಳು ಹಿನ್ನಡೆಯಾಗಿರುವುದನ್ನು ಮರಿಲಿಂಗ ಪಾಟೀಲ್ ವಿವರಿಸಿದರು. ಬರಗಾಲದ ಆತಂಕ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸುವಂತೆ ಒತ್ತಾಯಿಸಿದರು. ಇದಕ್ಕೆ ಸ್ಪಂದಿಸಿದ ಮಾನ್ಯ ಸಂಸದರು, "ರಾಯಚೂರು ಜಿಲ್ಲೆಯ ರೈತರು ಅನುಭವಿಸುತ್ತಿರುವ ಸಂಕಷ್ಟ ನನಗೆ ತಿಳಿದಿದೆ. ಮಳೆಯ ಕೊರತೆಯಿಂದ ಬೆಳೆಗಳಿಗೆ ಹಾನಿಯಾಗುತ್ತಿದೆ. ರೈತರ ಪರವಾಗಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಗಮನಕ್ಕೆ ಈ ವಿಷಯವನ್ನು ತಂದು, ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ಮನವಿ ಮಾಡುತ್ತೇನೆ. ದೇವದುರ್ಗ ಭಾಗದ ವಿದ್ಯುತ್ ಸಮಸ್ಯೆಯನ್ನೂ ಆದ್ಯತೆಯಾಗಿ ಬಗೆಹರಿಸಲು ಪ್ರಯತ್ನಿಸುತ್ತೇನೆ" ಎಂದು ಭರವಸೆ ನೀಡಿದರು. ರೈತರ ಹಿತಾಸಕ್ತಿಗೆ ತಕ್ಷಣ ಸ್ಪಂದಿಸಿದ ಮಾನ್ಯ ಸಂಸದರಿಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ದೇವದುರ್ಗ ತಾಲೂಕು ಘಟಕದ ಅಧ್ಯಕ್ಷರಾದ ಮರಿಲಿಂಗ ಪಾಟೀಲ್ ಹಾಗೂ ನೊಂದ ರೈತರು ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದರು.

"ಅನ್ನದಾತ ಸುಖಿಯಾಗಿದ್ದರೆ ದೇಶ ಸುಭಿಕ್ಷವಾಗಿರುತ್ತದೆ"ಳು ಇದ್ದರು.

# ಜಾಲಹಳ್ಳಿ ನಾಡ ಕಚೇರಿ ಮುಂದೆ ಜುಲೈ 8ರಂದು ಬೃಹತ್ ಪ್ರತಿಭಟನಾ ಧರಣಿ: ಕರ್ನಾಟಕ ದಲಿತ ಸಂಘರ್ಷ ಸಮಿತಿ




❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ, ದೇವದುರ್ಗ: ವಸತಿ ರಹಿತರಿಗೆ ನಿವೇಶನ, ಭೂ-ರಹಿತರಿಗೆ ಭೂ ಮಂಜೂರಾತಿ ಸೇರಿದಂತೆ ವಿವಿಧ ಜನಪರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಪ್ರೊ. ಬಿ. ಕೃಷ್ಣಪ್ಪ ಅವರು ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ) ರಾಜ್ಯ ಸಮಿತಿಯ ನೇತೃತ್ವದಲ್ಲಿ ಜುಲೈ 8, 2026 (ಬುಧವಾರ) ರಂದು ಜಾಲಹಳ್ಳಿ ನಾಡ ಕಚೇರಿ ಮುಂಭಾಗದಲ್ಲಿ ಬೃಹತ್ ಪ್ರತಿಭಟನಾ ಧರಣಿ ನಡೆಸಲಾಗುವುದು ಎಂದು ಸಂಘಟನೆಯ ಮುಖಂಡರು ತಿಳಿಸಿದ್ದಾರೆ.

ಈ ಕುರಿತು ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಗಿದ್ದು, ಬಡವರು ಹಾಗೂ ವಸತಿ ರಹಿತರಿಗೆ ನ್ಯಾಯ ಒದಗಿಸುವಂತೆ ಸರ್ಕಾರವನ್ನು ಆಗ್ರಹಿಸಲಾಗಿದೆ. ಬಗರ್ ಹುಕುಂ ಅರ್ಜಿಗಳ ಮರುಪರಿಶೀಲನೆಗೆ ಒತ್ತಾಯ ದಶಕಗಳಿಂದ ಸರ್ಕಾರಿ ಬಂಜರು ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ಜೀವನ ನಡೆಸುತ್ತಿರುವ ಭೂ-ರಹಿತ ಬಡವರು ನಮೂನೆ-57ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಸೂಕ್ತ ಕಾರಣವಿಲ್ಲದೆ ತಿರಸ್ಕರಿಸಲಾಗಿದೆ. ತಿರಸ್ಕರಿಸಿದ ಅರ್ಜಿಗಳನ್ನು ಮರುಪರಿಶೀಲಿಸಿ ಭೂ ಮಂಜೂರಾತಿ ನೀಡಬೇಕು ಎಂದು ಸಮಿತಿ ಒತ್ತಾಯಿಸಿದೆ.

ವಸತಿ ರಹಿತರಿಗೆ ನಿವೇಶನ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ನಿವೇಶನಗಳ ಬೆಲೆ ಏರಿಕೆಯಿಂದ ಬಡವರಿಗೆ ಮನೆ ನಿರ್ಮಾಣ ಅಸಾಧ್ಯವಾಗಿದೆ. ಸರ್ಕಾರಿ ಭೂಮಿ ಗುರುತಿಸಿ,

ಅದು ಲಭ್ಯವಿಲ್ಲದಿದ್ದರೆ ಖಾಸಗಿ ಭೂಮಿ ಖರೀದಿಸಿ 3040 ಅಳತೆಯ ನಿವೇಶನಗಳನ್ನು ವಿತರಿಸಬೇಕು ಎಂದು ಆಗ್ರಹಿಸಲಾಗಿದೆ. ಪ್ರಮುಖ ಬೇಡಿಕೆಗಳು ವಸತಿ ರಹಿತರಿಗೆ ನಿವೇಶನ ಹಂಚಿಕೆ. ನಮೂನೆ-57ರಡಿ ಸಲ್ಲಿಸಿದ ಅರ್ಜಿಗಳಿಗೆ ಭೂ ಮಂಜೂರಾತಿ. ಚಿಂಚೋಡಿ ಗ್ರಾಮದ ಸರ್ವೆ ನಂ.123ರ ಸರ್ಕಾರಿ ಭೂಮಿಯನ್ನು ವಸತಿ ನಿವೇಶನಕ್ಕೆ ಮಂಜೂರು ಮಾಡುವುದು. ಚಿಂಚೋಡಿ ಗ್ರಾಮದ ಸರ್ವೆ ನಂ.17 ಹಾಗೂ 51/1ರ ಭೂಮಿಗೆ ಹದ್ದುಬಸ್ತು ಕಾರ್ಯ ಕೈಗೊಳ್ಳುವುದು. ಸರ್ಕಾರಿ, ಅರಣ್ಯ, ಗೋಮಾಳ ಹಾಗೂ ಖಾಸಗಿ ಭೂಮಿಯಲ್ಲಿ ವಾಸಿಸುವ ಕುಟುಂಬಗಳಿಗೆ ಇ-ಸ್ವತ್ತು ನೀಡುವುದು. ಜಾಲಹಳ್ಳಿ?ದೇವದುರ್ಗ ರಸ್ತೆಗೆ ಸಂಪರ್ಕ ಕಲ್ಪಿಸುವ ಬಾಗೂರು ಹಾಗೂ ಹೇರುಂಡಿ ರಸ್ತೆ ಅಭಿವೃದ್ಧಿ. ಬುಂಕಲದೊಡ್ಡಿ ಸರ್ಕಾರಿ ಪ್ರೌಢಶಾಲೆಗೆ ಸಂಪರ್ಕ ರಸ್ತೆ ಹಾಗೂ ವಿದ್ಯುತ್ ವ್ಯವಸ್ಥೆ ಕಲ್ಪಿಸುವುದು.

ಜಾಲಹಳ್ಳಿ ವಾರ್ಡ್ 2 ಮತ್ತು 3ರಲ್ಲಿ ರಾಜಕಾಲುವೆ ಹಾಗೂ ಚರಂಡಿಗಳ ಹೂಳೆತ್ತುವುದು. ವೀರಗೋಟ ದಲಿತ ಕಾಲೋನಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಹಾಗೂ ರುದ್ರಭೂಮಿಗೆ ಸರ್ಕಾರಿ ಭೂಮಿ ಮಂಜೂರು ಮಾಡುವುದು. ಮನವಿ ಸಲ್ಲಿಸಿದವರು ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಸಂಚಾಲಕ ಹನುಮಂತಪ್ಪ ಕಾಕರಗಲ್, ತಾಲೂಕು ಸಂಚಾಲಕ ಶಿವಪ್ಪ ಪಲಕನಮರಡಿ, ಶಿವರಾಜ ಖೋರಿ ಗಣಜಲಿ, ಕ್ರಾಂತಿಕಾರಿ ಹಾಡುಗಾರ ಹೈದರ್ ಅಲಿ ಪಲಕನಮರಡಿ, ರಮೇಶ ಗೋಸ್ಲೆ, ಭೀಮಣ್ಣ ವೀರಗೋಟ, ಯೇಸು ಮಸಿರಕಲ್, ಬೂದೆಪ್ಪ ಮ್ಯಾತ್ರಿ, ನಾಗರಾಜ ಭೇರಿ, ರಂಗಪ್ಪ ನಾಯಕ, ತಿಮ್ಮಣ್ಣಗೌಡ, ಶಿವಪ್ಪ ಕಂಪೂರ್, ರಮೇಶ ಭಾವಿಮನಿ, ಚನ್ನಮ್ಮ, ಪಾರ್ವತಿ, ಸಲೀಂ, ಅಂಜಿನೇಯ್ಯ, ರಮೇಶ ಸೂಗೂರಾಳ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ.

# ವಯೋನಿವೃತ್ತಿ ಹಾಗೂ ಪದೋನ್ನತಿ ಬೀಳ್ಕೊಡುಗೆ ಸಮಾರಂಭ

❑ ನೈಜ್ಯ ದೆಸೆ ನ್ಯೂಸ್

ಅರಕೇರಾ: ಗ್ರಾಮೀಣಾಭಿವೃದ್ಧಿಯ ಪಯಣದಲ್ಲಿ ಸುಮಾರು 22 ವರ್ಷಗಳ ಕಾಲ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದರು. ಗ್ರಾಮ ಪಂಚಾಯತಿ ಮುಸ್ಟೂರುದಲ್ಲಿ ಬಿಲ್‌ಕಲ್ಟೇರ್ ಸೇವೆಯಿಂದ ಪ್ರಾರಂಭವಾಗಿ ಅಭಿವೃದ್ಧಿ ಅಧಿಕಾರಿಗಳಾಗಿ ವೆಂಕೋಬನಾಯಕ ಅವರು ತಮ್ಮ ಸೇವೆಯನ್ನು ಸಲ್ಲಿಸಿ. ಇತ್ತಿಚಿಗೆ ತಮ್ಮ ಸುದೀರ್ಘ ಸೇವೆಯಿಂದ ವಯೋನಿವೃತ್ತಿ ಹೊಂದಿದ್ದರು.

ವೃತ್ತಿಜೀವನದುದ್ದಕ್ಕೂ ಪ್ರಾಮಾಣಕತೆ,ದಕ್ಷತೆ ಮತು ಜನಪರ ಕಾಳಜಿ ಹೆಸರಾಗಿದ್ದರು.ಗ್ರಾಮ ಪಂಚಾಯತಿಗಳ ಕಾರ್ಯವೈಖರಿಯನ್ನು ಸುದಾರಿಸುವಲ್ಲಿ ಸರಕಾರದ ಯೋಜನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಮತ್ತು ಸ್ಥಳಿಯ ಆಡಳಿತವನ್ನು ಬಲಪಡಿಸುವಲ್ಲಿ ಅವರ ಪಾತ್ರ ಅನ್ಯನ. ಅವರು ಕಾರ್ಯನಿರ್ವಹಿಸಿದ ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲು ಅವರ ದೂರ ದೃಷ್ಟಿ ಮತ್ತು ಕ್ರಿಯಾಶೀಲತೆಯು ಹೊಸ ಬದಲಾವಣೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದರು ಎಂದು ಬಿಜೆಪಿ ಹಿರಿಯ ಮುಖಂಡರಾದ ಕೆ.ಅನಂತರಾಜನಾಯಕರವರು ಹೇಳಿದರು.

ಅವರು ಅರಕೇರಾ ಗ್ರಾಮಪಂಚಾಯತ ಅವರಣದಲ್ಲಿ ಹಮ್ಮಿಕೊಂಡಿದ್ದ ವಯೋನಿವೃತ್ತಿ



ವೆಂಕೋಬನಾಯಕ ಹಾಗೂ ಪದೋನ್ನತಿ ಯಮನಪ್ಪ ಕಾರ್ಯದರ್ಶಿ ಇವರುಗಳಿಗೆ ಬೀಳ್ಕೊಡುಗೆ ವೆಂಕೋಬನಾಯಕರವರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಅವರ ಸೇವಾವಧಿಯಲ್ಲಿ ಅನೇಕ ಸವಾಲುಗಳನ್ನು ಎದುರಿಸಿದರೂ ಅವುಗಳನ್ನು ಸಮರ್ಥವಾಗಿ ನಿಭಾಹಿಸಿ,ಗ್ರಾಮಗಳ ಅಭಿವೃದ್ಧಿಗೆ ಅಡೆತಡೆಗಳಾಗದಂತೆ ನೊಡಿಕೊಂಡರು.ಸ್ಥಳಿಯ ಜನಪ್ರತಿನೀಧಿಗಳು ಗ್ರಾಮಸ್ಥರು ಮತ್ತು ಸಹೋದ್ಯೋಗಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದಅವರು ಪ್ರತಿಯೊಬ್ಬರ ಅಭಿಪ್ರಾಯಗಳಿಗೂ ಮನ್ನಣೆ ನೀಡಿ ಸಾಮೂಹಿಕ ನಿರ್ಧಾಗಳಿಗೆ ಒತ್ತು ನೀಡಿತ್ತಿದ್ದರು,ಅವರ ಸರಳ ವ್ಯಕ್ತಿತ್ವ ಸದಾ ನಗುಮುಖ ಮತ್ತು ಸಮಸ್ಯೆಗಳನ್ನು ಅಲಿಸುವ ತಾಳ್ಮೆ ಎಲ್ಲರ ಮೆಚ್ಚುಗೆಗೆ ಪ್ರಾತವಾಗಿತ್ತು.

ಅಥಿತಿಗಳಾಗಿ ಶ್ರಿದೇವಿ ಆರ್ ನಾಯಕ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಮಾತನಾಡಿ ಸರಕಾರಿ ಅಧಿಕಾರಿಗಳಾಗಿ ನೀವು ನಿವೃತ್ತಿಯಾಗಿರಬಹುದು ನಿಮ್ಮ ಮನಸ್ಸಿನಲ್ಲಿ ಜನಗಳ ಸೇವೆ ಮಾಡೋದಕ್ಕೆ ನೀವು ಯಾವತ್ತೂ ನಿವೃತ್ತಿಯಾಗಿಲ್ಲ ಅಂತ ಈ ಸಂದರ್ಭದಲ್ಲಿ ಹೇಳಕ್ಕೆ ಇಷ್ಟ ಪಡ್ತೀನಿ ಹಾಗಾಗಿ ಮುಂದಿನ ದನಮಾನಗಳಲ್ಲಿ ನೀವು ಕೂಡಾ ಏನಾದರು ಸಮಾಜಸೇವೆ ಮಾಡುವಂತಹ ಕೆಲಸ ಮಾಡ್ರಿ ಅಂತ ಹೇಳಿದರು. ನಿಮ್ಮ ನಿವೃತ್ತಿ ಝೀವನ ಒಳ್ಳೆಯದಾಗಿರಲಿ,ಆರೋಗ್ಯ ಕೂಡಾ ಚೆನ್ನಾಗಿರಲಿ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿ ವೆಂಕೋಬನಾಯಕ ತಮ್ಮ ಜೀವನದುದ್ದುಕ್ಕೂ ಸಮಾಜಕ್ಕೆ ಸೇವೆ ಸಲ್ಲಿಸಲು ಸಿಕ್ಕ ಅವಕಾಶಕ್ಕೆ ಕೃತಜ್ಞತೆಸಲ್ಲಿಸಿದರು. ಮತ್ತು ನಿವೃತ್ತಿಯ ನಂತರವೂ ಸಮಾಜ ಸೇವಾ ಕಾರ್ಯಗಳಿಗೆ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಇಚ್ಚೆಯನ್ನು ವ್ಯಕ್ತಪಡಿಸಿದರು.ತಮ್ಮ ವೃತ್ತಿ ಜೀವನದ ಆರಂಭದಿಂದ ಇಂದಿನವರೆಗಿನ ಪಯಣವನ್ನು ಮೆಲುಕು ಹಾಕಿದರು.ನನ್ನ ವೃತ್ತಿ ಜೀವನದಲ್ಲಿ ಅನೇಕ ಸವಾಲುಗಳನ್ನು ಎದುರಿಸಿದ್ದೇನೆ. ತಮ್ಮ ಯಶಸ್ಸಿಗೆ ಕಾರಣರಾದ ಗ್ರಾಮದ ಮುಖಂಡರು ಪಂಚಾಯತಿಯ ಎಲ್ಲಾ ಸಿಬ್ಬಂದಿಗಳಿಗೂ ಗ್ರಾಮಸ್ಥರಿಗೂಎಲ್ಲರಿಗೂ ಕೃತಜ್ಞತೆಸಲ್ಲಿಸಿದರು.

ಡಾ.ಎಚ್ ಎ.ನಾಡಗೌಡ,ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಪಂಗಡ ವಿಭಾಗದ ಅಧ್ಯಕ್ಷರಾದ ಬಸವರಾಜಪೂಜಾರಿ,ವೆಂಕಟೇಶನಾಯಕದೊರೆ, ಚನ್ನವೀರಯ್ಯಸ್ವಾಮಿ ಹಿರೇಮಠ ಮಾತನಾಡಿದರು.


ವೇದಿಕೆ ಮೇಲೆ ಸತ್ಯನಾರಾಯಣನಾಯಕ ಪೋಲಿಸ್ ಪಾಟೀಲ್, ಸೀತಣ್ಣನಾಯಕ ಗುರಿಕಾರ,ಜಿ.ಬೂದೆಪ್ಪಸಾಹುಕಾರ, ಮಲ್ಲಿಕಾರ್ಜುನಸಾಹುಕಾರ ಗುಡಿ, ಜಾವಿದ್ ಆರ್ ಚಂಚೋಳಿಕರ್ ಮುಂತಾದವರು ಉಪಸ್ಥಿತರಿದ್ದರು

# ಖಾಸಗೀಕರಣದ ವಿರುದ್ಧದ ಹೋರಾಟಕ್ಕೆ ಸಂದ ಐತಿಹಾಸಿಕ ಜಯ ? ಚಂದ್ರಶೇಖರ ದೇಸಾಯಿ

❑ ನೈಜ್ಯ ದೆಸೆ ನ್ಯೂಸ್

ನಮ್ಮ ಒಗ್ಗಟ್ಟಿನ, ಸಂಘಟಿತ ಹಾಗೂ ನಿರಂತರ ಹೋರಾಟಕ್ಕೆ ಇಂದು ಐತಿಹಾಸಿಕ ಜಯ ದೊರೆತಿರುವುದನ್ನು ಅಪಾರ ಸಂತೋಷ ಹಾಗೂ ಹೆಮ್ಮೆಯಿಂದ ತಿಳಿಸುತ್ತಿದ್ದೇನೆ. ಇದು ಕೇವಲ ಒಂದು ಆಡಳಿತಾತ್ಮಕ ನಿರ್ಧಾರದ ಬದಲಾವಣೆ ಮಾತ್ರವಲ್ಲ; ಸಾರ್ವಜನಿಕ ವಲಯದ ರಕ್ಷಣೆಗಾಗಿ, ಜನಸಾಮಾನ್ಯರ ಹಿತಾಸಕ್ತಿಗಾಗಿ ಹಾಗೂ ನೌಕರರ ಭವಿಷ್ಯದ ಭದ್ರತೆಗಾಗಿ ನಡೆದ ಮಹತ್ತರ ಜನಾಂದೋಲನದ ಗೆಲುವಾಗಿದೆ.

ಇಂದು ಬೆಂಗಳೂರಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ದರ ನಿಯಂತ್ರಣ ಆಯೋಗ ಅಧ್ಯಕ್ಷರ ನೇತೃತ್ವದಲ್ಲಿ ನಡೆದ ವಿಚಾರಣೆಯಲ್ಲಿ, ರಾಜ್ಯದಲ್ಲಿ ವಿದ್ಯುತ್ ವಿತರಣಾ ಸಮನಾಂತರ ಪರವಾನಗಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಟಾಟಾ ಪವರ್ ಸಂಸ್ಥೆಯು ಸ್ವಯಂಪ್ರೇರಿತವಾಗಿ ಹಿಂಪಡೆದಿದೆ. ಇದು ನಮ್ಮ ಹೋರಾಟದ ಸಾರ್ಥಕತೆಯನ್ನು ಸಾಬೀತುಪಡಿಸುವ ಮಹತ್ವದ ಬೆಳವಣಿಗೆಯಾಗಿದೆ. ಈ ಜಯವು ಏಕಾಏಕಿ ಬಂದಿಲ್ಲ. ಇದರ ಹಿಂದೆ ಸಾವಿರಾರು ನೌಕರರ ಪರಿಶ್ರಮ, ಜನಸಾಮಾನ್ಯರ ಬೆಂಬಲ, ರೈತ ಬಾಂಧವರ ವಿಶ್ವಾಸ, ಹಿರಿಯರ ಮಾರ್ಗದರ್ಶನ ಹಾಗೂ ಸಂಘಟನೆಯ ಬಲ ಅಡಗಿದೆ.



ಸನ್ಮಾನ್ಯ ಡಿ. ಕೆ. ಶಿವಕುಮಾರ್ ಹಾಗೂ ಕೆ. ಜೆ. ಜಾರ್ಜ್ ಅವರ ಗಟ್ಟಿಯಾದ ನಿಲುವು ನಮ್ಮ ಹೋರಾಟಕ್ಕೆ ಅಪಾರ ಶಕ್ತಿ ತುಂಬಿತು. ರಾಜ್ಯದ ವಿದ್ಯುತ್ ಕ್ಷೇತ್ರವನ್ನು ಯಾವುದೇ ಕಾರಣಕ್ಕೂ ಖಾಸಗೀಕರಣಗೊಳಿಸಲು ಅವಕಾಶ ನೀಡುವುದಿಲ್ಲ ಎಂಬ ಅವರ ಸ್ಪಷ್ಟ ನಿಲುವು ನಮ್ಮ ಆತ್ಮವಿಶ್ವಾಸವನ್ನು ಮತ್ತಷ್ಟು ಬಲಪಡಿಸಿತು. ನಮ್ಮ ಇಲಾಖೆಯ ಖಾಯಂ ನೌಕರರು, ಅಧಿಕಾರಿಗಳು, ಗುತ್ತಿಗೆದಾರರು, ತಾತ್ಕಾಲಿಕ ಸಿಬ್ಬಂದಿ, ಗ್ರಾಹಕರು ಹಾಗೂ ವಿವಿಧ ಸಂಘ ಸಂಸ್ಥೆಗಳು ದಾಖಲೆ ಸಂಖ್ಯೆಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಿ ಹೋರಾಟಕ್ಕೆ ಜನಬಲ ಒದಗಿಸಿದರು.

ಪ್ರತಿಯೊಂದು ಆಕ್ಷೇಪಣೆಯೂ ಖಾಸಗೀಕರಣದ ಅಪಾಯವನ್ನು ತೋರಿಸುವ ಬಲವಾದ ದಾಖಲೆ ಆಯಿತು. ರಾಜ್ಯದ ರೈತ ಬಾಂಧವರು ಈ ಹೋರಾಟದಲ್ಲಿ ತೋರಿದ ಬೆಂಬಲ ಮರೆಯಲಾಗದು. ಕೃಷಿ ಮತ್ತು ಗ್ರಾಮೀಣ ಬದುಕಿಗೆ ವಿದ್ಯುತ್ ಎಷ್ಟು ಮುಖ್ಯವೋ ಅರಿತು, ಹಳ್ಳಿ ಹಳ್ಳಿಗಳಲ್ಲಿ ಜಾಗೃತಿ ಮೂಡಿಸಿ ಅವರು ನಮ್ಮೊಂದಿಗೆ ದೃಢವಾಗಿ ನಿಂತರು. ನಮ್ಮ ಒಕ್ಕೂಟ ಹಾಗೂ ವಿವಿಧ ಸಂಘಟನೆಗಳು ಸಲ್ಲಿಸಿದ ಕಾನೂನುಬದ್ಧ ಹಾಗೂ ತಾಂತ್ರಿಕ ಆಕ್ಷೇಪಣೆಗಳು ಅತ್ಯಂತ ಪರಿಣಾಮಕಾರಿಯಾಗಿದ್ದು, ಟಾಟಾ ಪವರ್ ಸಂಸ್ಥೆ ತನ್ನ ಅರ್ಜಿಯನ್ನು ಹಿಂಪಡೆಯುವಂತೆ ಮಾಡಿತು. ಬೆಂಗಳೂರಿನಲ್ಲಿ ನಡೆದ ಶಕ್ತಿ ಪ್ರದರ್ಶನ ಕಾರ್ಯಕ್ರಮದಲ್ಲಿ ಮೂವತ್ತು ಸಾವಿರಕ್ಕೂ ಹೆಚ್ಚು ನೌಕರರು ಹಾಗೂ ಅಧಿಕಾರಿಗಳು ಭಾಗವಹಿಸಿದ್ದು,

ನಮ್ಮ ಏಕತೆಯ ಅಪಾರ ಶಕ್ತಿಯನ್ನು ರಾಜ್ಯದ ಮುಂದೆ ತೋರಿಸಿತು. ಇದು ಕೇವಲ ಪ್ರತಿಭಟನೆ ಅಲ್ಲ; ನಮ್ಮ ಅಸ್ತಿತ್ವ, ಹಕ್ಕು ಹಾಗೂ ಜವಾಬ್ದಾರಿಯ ಘೋಷಣೆಯಾಗಿತ್ತು. ಪ್ರತಿಯೊಬ್ಬ ನೌಕರರು ತಮ್ಮ ಕ್ಷೇತ್ರದ ಶಾಸಕರು, ಸಚಿವರು ಹಾಗೂ ಜನಪ್ರತಿನಿಧಿಗಳನ್ನು ಭೇಟಿ ಮಾಡಿ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟರು. ಈ ನೇರ ಸಂವಾದ ಸರ್ಕಾರದ ಮಟ್ಟದಲ್ಲಿ ನಮ್ಮ ಧ್ವನಿಗೆ ಬಲ ತುಂಬಿತು. ನಿವೃತ್ತ ಹಿರಿಯ ಅಧಿಕಾರಿಗಳು ಹಾಗೂ ನೌಕರರು ನೀಡಿದ ಮಾರ್ಗದರ್ಶನ ಮತ್ತು ಅನುಭವ ನಮ್ಮ ಹೋರಾಟಕ್ಕೆ ದಿಕ್ಕು ತೋರಿಸಿತು.

ಅವರ ಸಲಹೆಗಳು ಪ್ರತಿಯೊಂದು ಹಂತದಲ್ಲೂ ಅಮೂಲ್ಯವಾದವು. ನೌಕರರು ಮತ್ತು ಅಧಿಕಾರಿಗಳು ಎಂಬ ಭೇದವಿಲ್ಲದೆ ಎಲ್ಲರೂ ಇಲಾಖೆಯ ಹಿತದೃಷ್ಟಿಯಿಂದ ಒಂದೇ ಕುಟುಂಬದಂತೆ ಶ್ರಮಿಸಿದ್ದು ಈ ಜಯದ ಅತಿ ದೊಡ್ಡ ಶಕ್ತಿ. ಈ ಐತಿಹಾಸಿಕ ಯಶಸ್ಸಿನ ರೂವಾರಿಗಳಾದ ಅಧ್ಯಕ್ಷ ಶ್ರೀ ಬಲರಾಮ್ ಕೆ., ಮಹಾ ಪ್ರಧಾನ ಕಾರ್ಯದರ್ಶಿ ಇಂಜಿನಿಯರ್ ಬಸವಣ್ಣ ಸಿ. ಹಾಗೂ ಎಲ್ಲಾ ಪದಾಧಿಕಾರಿಗಳು ಹಗಲಿರುಳು ಶ್ರಮಿಸಿ ರಾಜ್ಯದ ನೌಕರರನ್ನು ಒಗ್ಗೂಡಿಸಿ ಹೋರಾಟವನ್ನು ಯಶಸ್ವಿಗೊಳಿಸಿದರು. ಮುದ್ರಣ ಹಾಗೂ ದೃಶ್ಯ ಮಾಧ್ಯಮದ ಮಿತ್ರರ ಪಾತ್ರವೂ ಅತ್ಯಂತ ಶ್ಲಾಘನೀಯ. ಅವರು ನಮ್ಮ ಹೋರಾಟದ ಸತ್ಯಾಂಶಗಳನ್ನು ಜನತೆಗೆ ಹಾಗೂ ಸರ್ಕಾರಕ್ಕೆ ತಲುಪಿಸುವಲ್ಲಿ ಸೇತುವೆಯಾಗಿ ಕಾರ್ಯನಿರ್ವಹಿಸಿದರು.

ಇದು ಅಂತ್ಯವಲ್ಲ ಆರಂಭ ಮಾತ್ರ. ಮುಂದೆಯೂ ಇಲಾಖೆಯ ಹಿತಾಸಕ್ತಿ, ಸಾರ್ವಜನಿಕ ಸೇವೆಯ ರಕ್ಷಣೆ ಹಾಗೂ ಜನಹಿತಕ್ಕಾಗಿ ಇದೇ ರೀತಿಯ ಒಗ್ಗಟ್ಟು, ಸಂಘಟನೆ ಮತ್ತು ಹೋರಾಟದ ಮನೋಭಾವವನ್ನು ನಾವು ಉಳಿಸಿಕೊಳ್ಳಬೇಕು. ರಾಜ್ಯದ ಮೂಲೆಮೂಲೆಗಳಿಂದ ಬಂದು ಬೆಂಬಲಿಸಿದ ಪ್ರತಿಯೊಬ್ಬರಿಗೂ ಒಕ್ಕೂಟದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಧನ್ಯವಾದಗಳು. "ನಮ್ಮ ಒಗ್ಗಟ್ಟೇ ನಮ್ಮ ಶಕ್ತಿ; ನಮ್ಮ ಹೋರಾಟವೇ ನಮ್ಮ ಭವಿಷ್ಯದ ಭದ್ರತೆ." ಇಂಜಿನಿಯರ್ ಚಂದ್ರಶೇಖರ ದೇಸಾಯಿ ಮಹಾ ಕಾರ್ಯದರ್ಶಿ, ಕೆಇಬಿಇಎ ಹಾಗೂ ಪದಾಧಿಕಾರಿ ಕವಿಪ್ರನಿ ನೌಕರರ ಮತ್ತು ಅಧಿಕಾರಿಗಳ ಒಕ್ಕೂಟ

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101